ಶ್ರೀ ಬಿ. ಎ. ಉಮಾರಬ್ಬಿ.—ಒಂದು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಕೊಡಿ

ಅಧ್ಯಕ್ಷರು.—ಕೇಳಿತುಕೊಳ್ಳಿ. ನೀವು ಹೇಳುವುದು ರೆಕಾರ್ಡ್ ಆಗುವುದಿಲ್ಲ

[illegible] ೩. ಅಪ್ಪರ್ ತುಂಗಾ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು

ಶ್ರೀ ಡಿ. ಜಿ. ಬಸವನಗೌಡ.—ತುಂಗಾ ಮೇಲ್ದಂಡೆ ಯೋಜನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಾಗೂ ರಾಜ್ಯದ ಆಯವ್ಯಯದಲ್ಲಿ ಸೇರಿದ್ದು ಹಾಗೂ ಕೃಷ್ಣಾನದಿ ನೀರಿನ ಹಂಚಿಕೆಯಲ್ಲಿ ಲಭಿಸಿ ನೀರು ಒದಗಿಸಿದ್ದರೂ ಈ ಯೋಜನೆಯನ್ನು ಕಾರ್ಯಗತ ಮಾಡದಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.—

ಶ್ರೀ ಹೆಚ್. ಡಿ. ದೇವೇಗೌಡ (ನೀರಾವರಿ ಹಾಗೂ ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.—

1 The Upper Tunga Project as originally contemplated envisaged the raising of existing Tunga Anicut near Gajanur and a reservoir across Malathi River for irrigation 3.2 lakh acres in Shimoga and Honnali Taluks of Shimoga District, Hirekerur, Ranebennur, Haveri, Mundargi, Shirahatti, Shiggaon and Hanagal Taluks of Dharwar District and Koppal Taluk of Raichur District by running a left bank High Level Canal of Length 350 miles from Tunga Anicut The utilisation proposed was 40 TMC.

2 The M.I P.C. Board during May 1977 have approved two Master Plans for Krishna Basin, Viz one for an utilisation of 734 TMC for immediate implementation and the other for 1050 TMC. for ultimate utilisation which can be implemented only after the Krishna Valley Authority is established. In these Master Plans, allocations have been made for three Lift Irrigation Schemes on Tunga and Tungabhadra rivers as under.—

Sl. No.	Name of work	Allocation in 734 TMC Master Plan TMC	Allocation in 1050 TMC Master Plan TMC
1	Tunga Lift Irrigation Scheme at Gajanur	–	10
2	Tungabhadra Lift Irrigation Scheme at Bhairanpad.	–	12
3	Tungabhadra Lift Irrigation Scheme at Shingatallur	8	15
	Total	8	37

(However, as per the revised Master Plan sent to Central Water Commission vide Government letter No. PWD 1 MMM 87 dated

8-1-1987, an allocation of 8 TMC has been made in the 23 TMC component of 757 TMC Master PlanforTunga Lift Irrigation Scheme. Also, there is no allocation of water for the other two Lift Irrigation Schemes).

3 Detailed investigations for the above three Lift Irrigation Schemes are under progress.

4 In view of the acute Power shortage faced by the State and also difficulties involved in the management of large scale Lift Irrigation Schemes, an alternative to the three Lift Irrigation Schemes mentioned above, called as Upper Tunga (Flow Scheme) has also been taken up for detailed investigation being economical.

5 The Upper Tunga Flow Scheme comprises of the following.

i) Constructing a composite storage reservoir across Malathi, near Megaravalli village in Thirthahalli Taluk of Shimoga District to Store 32.44 TMC of Water.

ii) Modification to the existing Tunga Anicut near Gajanur including installation of crest shutters over the existing anicut and,

iii) Running a high level canal from Tunga Anicut for a length of 340 Kms (211 miles) to irrigate 94.695 ha. (2,34,000 acres). The project is intended to provide irrigation benefits to the arid areas of Shimoga and Dharwad districts.

Talukwise benefits of Irrigation by the above proposal are as under.—

Shimoga	...	5250	Acres)	Shimoga
Honnali	...	14780	Acres)	district
		20030	Acres	
Hirekerur	...	27310	Acres)	Dharwar
Ranebennur	...	107200	Acres)	District
Haveri	...	74820	Acres)	
Hangal	...	4030	Acres)	
		2,13,360	Acres	

Harihara	...	610 Acres	Chitradurga District
Grand Total		2,34,000 Acres	

6 The crop pattern proposed is Khariff Semi dry followed by Rabi Semidry. Utilisation under the project is about 37 TMC as per 1050 TMC Master Plan. The cost of the project is estimated at Rs. 234 Crores at S.R. 1984-85.

7 An extent of 25059 Acres is likely to come under submergence of Malathy Reservoir and 269 acres under Tunga anicut after erecting the crest gates upto on R.L. 1930.00 ft. Talukwise breakup of submergence is as follows.—

1	Malathy Reservoir		
	Thirthahalli	...	23,065 Acres
	Sringeri Taluk	...	1,852 Acres
	Koppa	...	142 Acres
			25,059 Acres
2	Tunga anicut (after erecting crest gates upto RL 1930.00 ft) Thirthahalli		269 Acres
		Total	25,328 Acres

Following is the breakup of submergence area

1	Malathy Reservoir		
	Forest	...	17,031 Acres
	Dry	...	5,853 Acres
	Wet	...	708 Acres
	Garden	...	1,241 Acres
	Coffee	...	38 Acres
	Kharab	...	198 Acres
			25,059 Acres
	Tunga Anicut (after erecting the crest gates npto RL 1930.00)		269 Acres
		Total	25.328 Acres

8 The investigations of this Project is almost completed. The Canal surveys beyond the Ranebennur Tunnel and taking trial bores along the Ranebennur tunnel, command area surveys and collection and testing of soil samples from borrow areas are yet to be completed.

9 The above project proposals were reviewed in the combined Technical committee meeting held on 5-9-1984 and in the Technical Committee held on 10-9-1985 and again the proposals were discussed with the Chairman, M.I.P.C. Board on 11-10-1985 and 21-10-1985 wherein the further directions were issued to prepare the preliminary report for 25 TMC utilisation. After further discussions a project for a utilisation of 15 TMC is under investigation.

10 After the investigations are completed and the final project report is got up the same will be after clearance by the Technical Committee, sent to Central Water Commission for approval.

11 There is a Budget provision of Rs. 25 lakhs for Upper Tunga Project in the current year Budget. After approval by the Government of India the project work will be taken up depending on the Finances of the State.

† ಶ್ರೀ ಡಿ. ಜಿ ಬಸವನಗೌಡ.— ಮಾನ್ಯ ಅಧ್ಯಕ್ಷರೇ, ಕಳೆದ ೨೦ ವರ್ಷಗಳಿಂದ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಿಂದ ಬಂದ ಶಾಸಕರು ಈ ಒಂದು ಯೋಜನೆ ಆದಷ್ಟು ತ್ವರಿತ ಗತಿಯಲ್ಲಿ ಪೂರ್ಣವಾಗಬೇಕೆಂದು ಸುಮಾರು ಮೂರೂವರೆ ಲಕ್ಷ ಎಕರೆ ನೀರಾವರಿಗೆ ಬರತಕ್ಕ ಬಗ್ಗರದ ಜಮೀನು ಏನಿದೆ ಅದಕ್ಕೆ ನೀರನ್ನುಣಿಸಿದರೆ ನಿಜವಾಗಿಯೂ ಆ ಭಾಗದ ರೈತರು ಚಿರಋಣಿಗಳಾಗುತ್ತಾರೆಂದು ಹೇಳುತ್ತಲೇ ಬಂದಿದ್ದಾರೆ. ಈ ಕೂಗು ಕಳೆದ ೨೦ ವರ್ಷಗಳಿಂದಲೂ ಇದೆ. ಮಾನ್ಯ ಸಚಿವರು ಕೊಟ್ಟ ಮಾಹಿತಿ ಪ್ರಕಾರ ಇದು ಖಂಡಿತವಾಗಿಯೂ ಫೀಜಿಬಲಿಟಿ ಆಗಿರತಕ್ಕ ಯೋಜನೆ. ಎಷ್ಟೇ ಆರ್ಥಿಕ ತೊಂದರೆ ಇದ್ದರೂ ಕೂಡಾ ಮೊನ್ನೆ ಕಾವೇರಿ ಬೇಸಿನ್ ಮೇಲೆ ತಾವು ಚರ್ಚೆ ಮಾಡಿದ್ದೀರಿ. ಹಾಗೇ ಕೃಷ್ಣಾ ಬೇಸಿನ್ ಬಗ್ಗೆ ಕೂಡಾ ರಾಜ್ಯ ಸರ್ಕಾರ ಯಾವ ರೀತಿ ಹಣ ಪೂರೈಸಬೇಕು ಎನ್ನುವ ಬಗ್ಗೆ ಇವತ್ತು ಚರ್ಚೆ ಕೂಡ ಈ ಸಭೆಯಲ್ಲಿ ಮಾಡುವವರಿದ್ದೇವೆ. ನಾವು ಆ ಜನಗಳ ಹಿತದೃಷ್ಟಿಯಿಂದ ಈ ಪ್ರಶ್ನೆಯನ್ನು ತಮ್ಮ ಮುಂದೆ ಎತ್ತಿದ್ದೇವೆ. ಆದ್ದರಿಂದ ಈ ಯೋಜನೆ ಬಗ್ಗೆ ಹೆಚ್ಚಿನ ವಿಸ್ತಾರಕ್ಕೆ ಹೋಗದೇ ಸಂಕ್ಷಿಪ್ತವಾಗಿ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸಂದರ್ಭಗಳಲ್ಲಿ ತಾವೂ ಕೂಡಾ ಈ ಬಗ್ಗೆ ಸದನದಲ್ಲಿ ಕೇಳಿದ್ದೀರಿ, ಅದಕ್ಕೆ ಸರ್ಕಾರದವರು ಕೂಡಾ ಸಮಜಾಯಿಸಿ ಉತ್ತರವನ್ನು ಕೊಟ್ಟಿದ್ದಾರೆ. ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಯ ಶಾಸಕರು ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡಬೇಕೆಂದು ಕೇಳುತ್ತಲೇ ಬಂದಿದ್ದಾರೆ. ಈ ಎಲ್ಲಾ ವಿಷಯಗಳನ್ನು ಯೋಚಿಸಬೇಕಾದುದ್ದು ಅವಶ್ಯಕವಿದೆ. ಮಾನ್ಯ ಸಚಿವರು ಇಂದಿನ ನಡೆಯತಕ್ಕ ಚರ್ಚೆಯಲ್ಲಿ ಅಪ್ಪರ್‌ತುಂಗಾ ಸ್ಕೀಮ್‌ಗಳನ್ನು ಸೇರಿಸಿಕೊಂಡು ಮುಂದಿನ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಂಡು ಕೇಂದ್ರ ಸರ್ಕಾರದ ಮುಂಜೂರಾತಿಯನ್ನು ಪಡೆದು ಆ ಭಾಗದ ಜಿಲ್ಲೆಯ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಕೋಳಿವಾಡ.— ಮಾನ್ಯ ಅಧ್ಯಕ್ಷರೆ, ಅಪ್ಪರ್‌ತುಂಗಾ ಯೋಜನೆಯ ಬಗ್ಗೆ ಸುಮಾರು ೨೦ ವರ್ಷಗಳಿಂದ ಈ ಸದನದಲ್ಲಿ ಧಾರವಾಡ ಹಾಗೂ ಶಿವಮೊಗ್ಗ ಜಿಲ್ಲೆಯ ಎಲ್ಲಾ ಸದಸ್ಯರು ಸತತವಾಗಿ ಸರ್ಕಾರವನ್ನು ಒತ್ತಾಯ ಮಾಡುತ್ತಾ ಬಂದಿದ್ದಾರೆ. ಈ ಯೋಜನೆಯಿಂದ ಸತತವಾಗಿ ಬರಗಾಲಕ್ಕೆ ಈಡಾಗುವಂತಹ ತಾಲ್ಲೂಕುಗಳು ನೀರಾವರಿ ಪ್ರದೇಶಗಳಾಗತಕ್ಕ ಅವಕಾಶವಿದೆ. ಹೀಗಿದ್ದರೂ ಸಹಿತ ೧೯೭೭ ರಲ್ಲಿ ನ್ಯಾಯಮಂಡಳಿಯ ತೀರ್ಪಿನ ಪ್ರಕಾರ ೮ ಟಿ. ಎಂ. ಸಿ. ನೀರನ್ನು

ಅಪ್ಪರ್‌ತುಂಗಾಕ್ಕೆ ವಿೂಸಲಿಡಬೇಕೆಂದು ಆಗಿರುವಂತಹ ತೀರ್ಮಾನದ ಸಂಗತಿಯನ್ನು ನಾನು ತಿಳಿದು ಕೊಂಡಿದ್ದೇವೆ. ಅದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ಒತ್ತಾಯ ತಂದರೂ ಸಹಿತ ಸರ್ಕಾರದವರು ಉತ್ತರ ಕರ್ನಾಟಕದ ರೈತರ ಬಗ್ಗೆ ಹೆಚ್ಚು ಗಮನಹರಿಸಿದ್ದಾರೆಯೋ ಇಲ್ಲವೋ ಎನ್ನುವ ಸಂಶಯ ನನಗೆ ಬರುತ್ತಿದೆ.

ಅಧ್ಯಕ್ಷರು — ಮಾನ್ಯ ಮಂತ್ರಿಗಳು ಗಮನಹರಿಸಿದ್ದೇವೆ, ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆ, ಬಡ್ಜೆಟ್‌ನಲ್ಲಿ ಸೇರಿಸಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಈ ರೀತಿ ನೆಗೆಟಿವ್ ಆಗಿ ತಾವು ಮಾತನಾಡುವುದು ಬೇಡ. ಸರ್ಕಾರವನ್ನು ತಾವು ಅಪ್ರಿಸಿಯೇಟ್ ಮಾಡಬೇಕು.

ಶ್ರೀ ಕೆ. ಬಿ. ಕೋಳಿವಾಡ.— ಅನೇಕ ರೀತಿಯ ಒತ್ತಾಯವನ್ನು ಸರ್ಕಾರದ ಮುಂದೆ ನಾವು ತರುತ್ತಿದ್ದೇವೆ. ಜನತಾ ಸರ್ಕಾರವಿರಲಿ, ಕಾಂಗ್ರೆಸ್ ಸರ್ಕಾರವಿರಲಿ ನಮ್ಮ ಒತ್ತಾಯ ಮೊದಲಿನಿಂದ ಇದೆ ಎನ್ನುವುದನ್ನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಕರ್ನಾಟಕದ ದಕ್ಷಿಣಭಾಗದಿಂದ ಹಿಂದಿನಿಂದ ಬಂದಂತಹ ನೀರಾವರಿ ಮಂತ್ರಿಗಳು ಈ ಕಡೆಗೆ ಎಷ್ಟು ಮಹತ್ವವನ್ನು ಕೊಟ್ಟಿದ್ದಾರೆಯೋ ಅಷ್ಟು ಮಹತ್ವವನ್ನು ಉತ್ತರ ಕರ್ನಾಟಕದ ಬಗ್ಗೆ ಮಹತ್ವ ಕೊಟ್ಟಿದ್ದರೆ ಇನ್ನು ಹೆಚ್ಚು ನೀರಾವರಿ ಉತ್ತರ ಕರ್ನಾಟಕದ ಜನರಿಗೆ ಕೊಡಬಹುದಾಗಿತ್ತು.

ಅಧ್ಯಕ್ಷರು.— ತಾವು ರಾಜಕೀಯ ಭಾಷಣ ಮಾಡಬೇಡಿ. ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆ. ಬಡ್ಜೆಟ್‌ನಲ್ಲಿ ಸೇರಿಸಿದ್ದೇವೆಂದು ಹೇಳಿದ್ದಾರೆ, ಆದರೂ ಸಹ ನೀವು ಅದನ್ನೇ ಹೇಳುತ್ತಿದ್ದೀರಲ್ಲಾ.

ಶ್ರೀ ಕೆ. ಬಿ. ಕೋಳಿವಾಡ,— ನಾನು ಸರ್ಕಾರಕ್ಕೆ ಕಾಂಪ್ಲಿಮೆಂಟ್ ಕೊಡುತ್ತಿದ್ದೇನೆ. ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದಾರೆ, ಆಯವ್ಯಯದಲ್ಲಿ ಸೇರಿಸಿದ್ದಾರೆ, ೨೫ಲಕ್ಷ ರೂಪಾಯಿಗಳ ಮೊತ್ತವನ್ನು ಸಹ ಇಟ್ಟಿದ್ದಾರೆ. ಅದಕ್ಕಾಗಿ ಉತ್ತರ ಕರ್ನಾಟಕದ ಜನ ಇವರಿಗೆ ಋಣಿಗಳಾಗಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಅದರ ಜೊತೆಗೆ ಹಣವನ್ನು ಸಹ ಖರ್ಚು ಮಾಡಬೇಕು. ಇನ್ನೊಂದು ಮಹತ್ವದ ವಿಚಾರವನ್ನು ನಾವು ಆರಿತುಕೊಳ್ಳಬೇಕು. ಮಾನ್ಯ ಮಂತ್ರಿಗಳ ಬುದ್ಧಿವಂತಿಕೆಯಿಂದ ಸರ್ಕಾರದ ಬುದ್ಧಿವಂತಿಕೆಯಿಂದ ಅಪ್ಪರ್‌ತುಂಗಾ ಯೋಜನೆಯನ್ನು ಮೂರು ಹಂತವಾಗಿ ತೆಗೆದುಕೊಳ್ಳುತ್ತೇವೆಂದು ಹೇಳಿಂತ್ತಿದ್ದಾರೆ.

The Upper Tunga Flow Scheme comprises of the following:

(i) Constructing a composits storage reservoir across Malathi, near Megaravalli village in Thirthahalli Taluk of Shimoga District to Store 32.44 TMC Water.

(ii) Modifications to the existing Tunga Anicut near Gajanur including installation of crest shutters over the existng anicut and;

(iii) Running a high level canal from Tunga Anicut for a length of 340 Kms (211 miles) to irrigate 94,695he. (2 34,000 acres) The project is intended to provide irrigation benefits to the arid areas of Shimoga and Dharwad districts.

ಮಾಲತಿ ರಿಸರ್ವಾಯರ್‌ಗೆ ಖರ್ಚು ಮಾಡಲಿಕ್ಕೆ ಎಷ್ಟು ಕೊಟ್ಟಿದ್ದೀರಿ, ಅಣೆಕಟ್ಟಿಗೆ ಕ್ರಿಸ್ಟ್‌ಗೇಟ್ ಆಚ್ಚಲಿಕ್ಕೆ ಎಷ್ಟು ಖರ್ಚು ಬರುತ್ತದೆ ಎಂಬುದನ್ನು ದಯವಿಟ್ಟು ಹೇಳಬೇಕು. ಯಾವುದೇ ಸಂದರ್ಭದಲ್ಲಿ ಈ ಯೋಜನೆಯ ಬಗ್ಗೆ ಪ್ರಶ್ನೆ ಕೇಳಿದಾಗ ಮಾಲತಿ ಯೋಜನೆ ಮಾಡುತ್ತೇವೆ ಅದರಿಂದ ೨೫-೩೫ ಸಾವಿರ ಎಕರೆ ಕಬ್ ಮರ್ಸನ್ ಆಗುತ್ತದೆ, ಅದಕ್ಕೆ ರೈತರು ತಕರಾರು ಮಾಡುತ್ತಿದ್ದಾರೆಂದು ಹೇಳಿಕೊಂಡು ಈ ಯೋಜನೆಯನ್ನು ಪುಂಡಿ ತಳ್ಳುತಕ್ಕ ಕೆಲಸ ಮಾಡುತ್ತಿದ್ದರು. ಮಾನ್ಯ ಮಂತ್ರಿಗಳು ಈಗ ಸ್ಪಷ್ಟವಾಗಿ ಹೇಳಬೇಕು. ತುಂಗಾ ಅಣೆಕಟ್ಟು ಕಟ್ಟಿ, ಕ್ರಿಸ್ಟ್‌ಗೇಟ್ ಅಚ್ಚಿದಾಗ ಮಾಳುಗಡೆಯಾಗ

ತಕ್ಕದ್ದು ೨೬೯ ಎಕರೆಗಳು. ಮೂಲತಃ ರಿಸರ್ವಾಯರ್ ನಿಂದ ಸಬ್‌ಮರ್ಸನ್ ಆಗತಕ್ಕ ಏರಿಯಾ ೨೫,೦೭೯ ಎಕರೆಗಳಂ ಎಷ್ಟು ಉದ್ದ ಕೆನಾಲ್ ತೋಡಲಾಗುವುದು ಎಂಬ ವಿವರವನ್ನು ಕೊಟ್ಟಿಲ್ಲ.

ಈ area to be irrigated ಈ ತುಂಗಭದ್ರಾ ಕ್ರಸ್‌ಶಟರ್ಸ್ ಹೆಚ್ಚಿದರೆ ಕ್ಷಾಂತರ ಎಕರೆಗೆ ನೀರಾವರಿಯಾಗುತ್ತದೆ. ಈಗ ಬಚಾವತ್ ಅವಾರ್ಡ್‌ನಲ್ಲಿ ೮ ಟಿಎಂಸಿ ನೀರು ಕೊಡುವುದಕ್ಕೆ ಅವಕಾಶ ಇದೆ. ಸ್ವಲ್ಪ ಖರ್ಚಿನಲ್ಲಿ ಆಗತಕ್ಕಂಥ ಕೆಲಸವನ್ನು ಮಾಡಲಿಕ್ಕೆ ಕೇಂದ್ರಸರ್ಕಾರದ ಮನ್ನಣೆಯ ಅವಶ್ಯಕತೆ ಏನು ಇದೆ? ಸಬ್‌ಮರ್ಜ್ ಆಗುವುದಿಲ್ಲ. ಹಣ ಹೆಚ್ಚು ಖರ್ಚಾಗುವುದಿಲ್ಲ ಹೆಚ್ಚು ಜಾಗ ನೀರಾವರಿ ಆಗತಕ್ಕಂಥ ಯೋಜನೆಯನ್ನು ತತ್‌ಕ್ಷಣ ಏತಕ್ಕೆ ಪ್ರಾರಂಭ ಮಾಡಬಾರದು ? ಒಂದು ವೇಳೆ ಸರ್ಕಾರದಲ್ಲಿ ಹಣ ಇಲ್ಲವೆಂದರೆ ಕ್ರಸ್ ಶಟರ್ಸ್ ಹೆಚ್ಚತಕ್ಕಂಥ ಯೋಜನೆಯನ್ನು ಮಾಡಿ. ಆಯಾಯ ತಾಲ್ಲೂಕಿನಲ್ಲಿ ಟನಲ್ ಕಟ್ಟತಕ್ಕಂಥ ಕೆಲಸವನ್ನು ಮಾಡಲಿಕ್ಕೆ ಆಯಾಯ ತಾಲ್ಲೂಕಿನವರು ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತೇವೆ. ಇರಿಗೇಷನ್ ಬಾಂಡ್‌ನಿಂದಾದರೂ ದುಡ್ಡು ಕೂಡಿಸಿ, ಆಯಾಯ ತಾಲ್ಲೂಕಿನವರು ಈ ಕೆಲಸವನ್ನು ಮಾಡುತ್ತೇವೆ. ಕೇವಲ ಕ್ರಸ್ಸ ಶಟರ್ಸ್ ಕಟ್ಟಿಸಲಿಕ್ಕೆ ಸರ್ಕಾರ ತಕ್ಷಣ ಪ್ರಾರಂಭ ಮಾಡಲಿ. ಇದಕ್ಕೆ ಕೇಂದ್ರ ಸರ್ಕಾರದ ಮನ್ನಣೆಯ ಅವಶ್ಯಕತೆ ಇಲ್ಲ ಮನ್ನಣೆ ಏತಕ್ಕೆ ಬೇಕು ? ಇದು ಸ್ವಲ್ಪ ಖರ್ಚಿನಲ್ಲಿ ಆಗತಕ್ಕಂಥಾದ್ದು. ಕೆಲವೇ ಕೋಟಿ ರೂಪಾಯಿಗಳು ಸಾಕು. ಈ ಕೆಲಸಕ್ಕೆ ಕೇಂದ್ರ ಸರ್ಕಾರದ ಮನ್ನಣೆಯು ಅವಶ್ಯಕತೆ ಇಲ್ಲ. ಆದ್ದರಿಂದ ಇದನ್ನು ಕೂಡಲೇ ಪ್ರಾರಂಭ ಮಾಡಬೇಕು. ಇವತ್ತು ಆಂಧ್ರಪ್ರದೇಶದವರು ತೆಲುಗುಗಂಗಾ ಯೋಜನೆ ಮಾಡಿದಾಗ ಕೇಂದ್ರಸರ್ಕಾರದ ಮನ್ನಣೆ ತೆಗೆದುಕೊಂಡು ಪ್ರಾರಂಭ ಮಾಡಿದ್ದಾರಾ ? ಇಲ್ಲ, ಇವತ್ತು ಈ ಯೋಜನೆಯನ್ನು ಮುಂದೂಡಲಿಕ್ಕೆ ಏನಾದರೂ ಒಂದು ನೆಪವನ್ನು ಹುಡುಕಿಕೊಂಡಾರು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಸುಮಾರು ೨೦-೨೫ ವರ್ಷಗಳಿಂದ ಈ ಯೋಜನೆಯ ಬಗ್ಗೆ ಶಾಸಕರು ಪದೇ ಪದೇ ಈ ಸದನದಲ್ಲಿ ಒತ್ತಾಯ ಮಾಡುತ್ತಿದ್ದಾರೆ. ಇದರ ಬಗ್ಗೆ ಹೆಚ್ಚಿನ ಗಮನಕೊಟ್ಟು ಈ ೨ನೇ ಹಂತ ಏನಿದೆ, modification to the existing Tunga near Gajanur including installation of crust shutters over the exisiting anicut..... ಏನಿದೆ, ಇದರ ಪ್ರಾರಂಭವನ್ನು ತಕ್ಷಣದ ದಿವಸಗಳಲ್ಲಿ ಮಾಡುತ್ತೇವೆ ಎಂದು ಮಾನ್ಯ ಮಂತ್ರಿಗಳಿಂದ ಉತ್ತರ ನಮಗೆ ಬೇಕು. ಈ ಉತ್ತರ ಬಾರದೇ ಹೋದರೆ ಈ ಸರ್ಕಾರಕ್ಕೆ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಿಕ್ಕೆ ಇಚ್ಛೆ ತೀವ್ರಗತಿಯಲ್ಲಿ ಇಲ್ಲವೆಂಬ ಭಾವನೆಯನ್ನು ನಾವು ಅನಿವಾರ್ಯವಾಗಿ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ಈ ಯೋಜನೆಯ ಮಹತ್ವವನ್ನು ತಾವು ಈಗಾಗಲೇ ಅರಿತಿದ್ದೀರಿ. ಕೇಂದ್ರ ಸರ್ಕಾರಕ್ಕೆ ಕಳಿಸುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಇನ್ವೆಸ್ಟಿಗೇಶನ್ ನಡೆಯುತ್ತಿದೆ ಎಂದು ಹೇಳುತ್ತೀರಿ. ಎಷ್ಟು ದಿವಸ ಬೇಕು ಈ ಇನ್ವೆಸ್ಟಿಗೇಶನ್ ಮಾಡುವುದಕ್ಕೆ ? ೧೯೭೨ನೇ ಇಸವಿಯಲ್ಲಿ ಮೊದಲಬಾರಿಗೆ ನಾನು ಶಾಸಕನಾಗಿ ಬಂದಾಗ ಮೊದಲು ಕೇಳಿದ ಪ್ರಶ್ನೆಗೂ ಸಹ ಇದೇ ಉತ್ತರ ಇತ್ತು. ಈಗ ೧೯೮೮ನೇ ಇಸವಿಯಲ್ಲಿ ಸಹಿತ ನಾನು ಕೇಳಿದಾಗ ಇದೇ ಉತ್ತರ ಇದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ, ಏನೆಂದರೆ ಈ ಮೂಲತಃ ರಿಸರ್ವಾಯರನ್ನು ನಮ್ಮ ಕಣ್ಣುಮುಂದೆ ಇಟ್ಟು ಸಬ್‌ಮರ್ಜನ್ ಆಗತಕ್ಕಂಥ ಏರಿಯಾ ೨೫ ಸಾವಿರ ಎಕರೆ ಆಗುತ್ತದೆ ಎಂದು ಹೇಳುತ್ತಲೇ ಇದಕ್ಕೆ ೨೩ಳಿ ಕೋಟಿ ರೂಪಾಯಿ ಖರ್ಚಾಗುತ್ತದೆ ಎನ್ನತಕ್ಕಂಥ ದೊಡ್ಡ ಮೊತ್ತವನ್ನು ನಮ್ಮ ಕಣ್ಣೆದುರಿಗೆ ಇಟ್ಟುಕೊಂಡು ಈ ಯೋಜನೆಯನ್ನು ಮುಂದೆ ತಳ್ಳುವುದು ಬೇಡ. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಬೇಕಾದರೆ ಮೂಲತಿ ರಿಸರ್ವಾಯರ್‌ಗೆ ಸ್ವಲ್ಪ ಅವಧಿ ತೆಗೆದುಕೊಳ್ಳಿ. ಆದರೆ ತುಂಗಾ ಅಣೆಕಟ್ಟು ಕ್ರಸ್ ಶಟರ್ಸ್ ಇರತಕ್ಕಂಥ ಕೆಲಸ ಏನಿದೆ, ಅದು ಕಡಿಮೆ ಮೊತ್ತದಲ್ಲಿ ಆಗತಕ್ಕಂಥಾದ್ದು. ಇದನ್ನು ಕೂಡಲೇ ಪ್ರಾರಂಭ ಮಾಡಬೇಕೆಂದು ಸಮಗ್ರ ಉತ್ತರ ಕರ್ನಾಟಕದ ಜನತೆಯ ಪರವಾಗಿ ಹೆಚ್ಚಿನ ಒತ್ತಡವನ್ನು ಮಾನ್ಯ ಮಂತ್ರಿಗಳ ಮೇಲೆ ತಂದು ಇದನ್ನು ಕೂಡಲೇ ಈ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕೆಂದು ಹೇಳಂತ್ತೇನೆ.

೧೧.೦೦ ಎ.ಎಂ.

† ಶ್ರೀ ಕೆ. ಹೆಚ್. ಶ್ರೀನಿವಾಸ್.— ಸನ್ಮಾನ್ಯ ಅಧ್ಯಕ್ಷರೇ, ಈ ಯೋಜನೆ ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರತಕ್ಕ, ಗೊಂದಲದ ಸುಳಿಯಲ್ಲಿ ಸಿಕ್ಕಿರತಕ್ಕ ಒಂದು ಯೋಜನೆ. ತಾವು

ಕೂಡ ಶಾಸಕರಾಗಿ, ಈಗ ಸಭಾಧ್ಯಕ್ಷರಾಗಿ ತಮ್ಮ ಕೈಲಾದ ಪ್ರಯತ್ನಗಳನ್ನು ಮಾಡಿದ್ದೀರಿ. ನೀವು ಬರೆದಂತಹ ಕಾಗದವನ್ನೂ ಸಹ ನಾನು ನೋಡಿದೆ. ನೀವು ಮಾಡಿರತಕ್ಕ ಪ್ರಯತ್ನಗಳನ್ನೂ ಕೂಡ, ಒಂದು ಡಾಕ್ಯುಮೆಂಟ್ ತರಹ ದಾಖಲಾತಿ ಮಾಡಿದ್ದೀರಿ. ಅದಕ್ಕಾಗಿ ನನ್ನ ಕೃತಜ್ಞತೆಗಳು. ನಾವು ಇವತ್ತು ಈ ಒಂದು ಗಮನಸೆಳೆಯುವ ಸೂಚನೆಯನ್ನು ಮಂಡಿಸಿದಾಗ, ಸರ್ಕಾರದ ಪರವಾಗಿ ಮಾನ್ಯ ಸಚಿವರು ತಮ್ಮ ಒಂದು ಖಚಿತವಾದ ಚಿತ್ರಣವನ್ನು ನಮಗೆ ಕೊಡುತ್ತಾರೆಂಬ ನಿರೀಕ್ಷೆ ಇತ್ತು. ಆದರೆ ಅವರು ಕೊಟ್ಟಿರತಕ್ಕ ಸ್ಟೇಟ್‌ಮೆಂಟ್ ಓದಿದೆ. ಅವರು ಆಂಗ್ಲಭಾಷೆಯಲ್ಲಿ ಏನು ಹೇಳುತ್ತಾರೆ ಎಂದರೆ, confusion rendered much more confounded. ಈ ರೀತಿಯಲ್ಲಿ ಇವತ್ತಿನವರೆಗೂ ಏನೇನು ಗೊಂದಲಗಳು ಇವೆಯೋ, ಆ ಎಲ್ಲಾ ಗೊಂದಲಗಳನ್ನೂ ಅವರ ಹೇಳಿಕೆಯು ಮೂಲಕ ನಮಗೆ ಮತ್ತೆ ಸಾಕ್ಷ್ಯಾಧಾರ ಮಾಡಿ ಕೊಟ್ಟಿದ್ದಾರಯೇ ಹೊರತು, ಅದಕ್ಕಿಂತ ಹೆಚ್ಚಿಗೆ ಒಂದು ಅಂಶವನ್ನೂ ಕೂಡ ಸ್ಪಷ್ಟ ಮಾಡುವ ಗೋಜಿಗೆ ಹೋಗಿಲ್ಲ. ಮಾನ್ಯ ದೇವೇಗೌಡರಿಗೆ ಕೆಲವಾರು ಕಲೆಗಳು ಸಿದ್ಧಿಯಾಗಿವೆ ಅವರು ಇದರ ಬಗ್ಗೆ ತಪಸ್ಸು ಮಾಡಿ ಸಿದ್ಧಿ ಪಡೆದುಕೊಂಡಿದ್ದಾರೆ. ಅವರಿಗೆ ಬೇಕು ಎಂದಾಗ ಹೇಗೆ ಗೊಂದಲ ಎಬ್ಬಿಸಬೇಕು ಎಂಬುದೂ ಗೊತ್ತಿದೆ, ಬೇಡ ಎಂದಾಗ ಯಾವರೀತಿ ಮಾಡಬೇಕೆಂಬುದೂ ಗೊತ್ತಿದೆ, ಅವರಿಗೆ ಹೇಮಾವತಿ ಮತ್ತೊಂದು ಆಗಿದ್ದರೆ ಬಹಳ ಕರಾರುವಕ್ಕಾಗಿ ನಿಲುವು ತೆಗದುಕೊಳ್ಳುತ್ತಿದ್ದರು. ಕೃಷ್ಣ ಮೇಲ್ದಂಡೆ, ಕಾವೇರಿ ಯೋಜನೆಗಳಿಗೆ ಅಪ್ಪ, ಅಮ್ಮ, ನೆಂಟರಿಷ್ಟರು ಇದ್ದಾರೆ. ಈ ಒಂದು ಯೋಜನೆಗೆ ಹುಟ್ಟಿದವರಭ್ಯ ಅಪ್ಪ ಇಲ್ಲ, ಅಮ್ಮ ಇಲ್ಲನೆಂಟರಿಷ್ಟರೂ ಇಲ್ಲ ಅಂತಹ ಒಂದು ದುಸ್ಥಿತಿಯಲ್ಲಿದೆ. ತಾಪು ಮಂತ್ರಿಮಂಡಲದಲ್ಲಿ ಮಂತ್ರಿಗಳಾಗಿ ಅದರಲ್ಲೂ ಇರಿಗೇಷನ್ ಮಂತ್ರಿಗಳಾಗಿದ್ದಾರೆ,ಇದಕ್ಕೆ ಮೋಕ್ಷ ಸಿಗುತ್ತಿತ್ತು. ಆದರೆ ಇವತ್ತು ಮಾನ್ಯದೇವೇಗೌಡರು ಇರಿಗೇಷನ್ ಮಂತ್ರಿಗಳಾಗಿದ್ದಾರೆ, ಅವರೂ ಕೂಡ ಇದಕ್ಕೆ ಬಜೆಟ್ ಕೊಡುವುದಿಲ್ಲ ಎಂದು ಹೇಳುವುದಿಲ್ಲ. 'I didn't love ceaser less but I love crown'...ಎಂದು ಹೇಳಿದಹಾಗೆ. ಈ ಪ್ರಾಜೆಕ್ಟ್ ಆಗುವುದರ ಬಗ್ಗೆ ಹೆಚ್ಚಿನ ಕಾಳಜಿ ಬರುತ್ತಿತ್ತು. ನೀವು ಒಂದು ತರಹ ''ಏಕ್‌ಮಾರ್ ದೋ ತುಕ್ಡಾ'' ಇದ್ದಹಾಗೆ. ಈ ತರಹ ಹೇಳಿಕೆ ಕೊಡುತ್ತಾ ಇರಲಿಲ್ಲ. ಇದು ಏನಾಗಿದೆ ಎಂದರೆ, ಒಂದುಕಡೆ ಮಾಲತಿ ರಿಸರ್‌ವಾಯರ್ ತೋರಿಸುತ್ತಾರೆ, ಇನ್ನೊಂದುಕಡೆ ಮೂರು ಲಿಫ್ಟ್ ಇರಿಗೇಷನ್ ತೋರಿಸುತ್ತಾರೆ. ಮತ್ತೊಂದು ಕಡೆ ಕ್ರಸ್ಟ್‌ಗೇಟ್ ಹೈಲೆವೆಲ್, ಲೋ ಲೆವೆಲ್ ತುಂಗಾ ಲಿಫ್ಟ್ ಇರಿಗೇಷನ್ ತೋರಿಸುತ್ತೀರಿ. ಬಜೆಟ್‌ನಲ್ಲಿ ಸೇರಿದ ಕೂಡಲೇ ಇನ್ನೇನು ಆಗಿಯೇ ಹೋಯಿತು ಎಂಬ ಭ್ರಮೆ ನನಗಿಲ್ಲ, ನಾನು ೧೯೬೭ರಲ್ಲಿ ಶಾಸಕನಾಗಿ ಬಂದಾಗ, ಈ ತರಹ ಆದಾಗ ಸ್ವಲ್ಪ ಭ್ರಮೆ ಇತ್ತು. ಆದರೆ ಈಗ ಅಂತಹ ಭ್ರಮೆ ಇಲ್ಲ, ಯಾಕೆಂದರೆ, ಬಜೆಟಿನಲ್ಲಿ ಸೇರಿಸಿದ್ದರೂ ಕೂಡ, ಅವು ಕಾರ್ಯರೂಪಕ್ಕೆ ಬರದೇ ಇರತಕ್ಕ ಸ್ಥಿತಿಯನ್ನು ತಲುಪಿರುವುದರಿಂದ, ನಾವು ಇದಕ್ಕೆ ಯಾರನ್ನೂ ಹೊಣೆಗಾರರನ್ನಾಗಿ ಮಾಡುವ ಪರಿಸ್ಥಿತಿ ಇಲ್ಲ. ಇದು ವಾಸ್ತವಾಂಶ. ಈ ಪರಿಸ್ಥಿತಿಯಲ್ಲಿ ತುಂಗಾ ಯೋಜನೆಗೆ ೨ ಕೋಟಿ ೨೫ ಲಕ್ಷ ಸೇರಿದೆ. ಮಾನ್ಯ ದೇವೇಗೌಡರು ಬಜೆಟ್‌ನಲ್ಲಿ ಸೇರಿಸಿದ್ದಾರೆ. ಆದರೆ ಇದರ ಬಗ್ಗೆ ಇನ್ನೂ ಕೆಲಸ ಆಗಿಲ್ಲ. ಮತ್ತೆ ಲೋ ಲೆವೆಲ್, ಲಿಫ್ಟ್ ಇರಿಗೇಷನ್, ಹೈಲೆವೆಲ್ ಲಿಫ್ಟ್ ಇರಿಗೇಷನ್ ಮಾಡಬೇಕು. ಮತ್ತೆ ಕ್ರಸ್ಟ್ ಗೇಟ್ ಮಾಲತಿ ರಿಸರ್ವಾಯರ್ ಮಾಡಬೇಕು, ಈ ರೀತಿ ೫-೬ ಪ್ರಶ್ನೆಗಳು ಅದರಲ್ಲಿ ಸೇರಿವೆ. ಆದ್ದರಿಂದ ಇದರಲ್ಲಿ ತಾತ್ಪರ್ಯ. ಕೊನೆಗೆ ಏನಾಗಬೇಕೆಂಬ ತೀರ್ಮಾನ ಆಗರೊಳಗೆ ಇಲ್ಲ.

ಇಂತಹದನ್ನು ಮಾಡುವುದು ಯೋಗ್ಯ ಎಂದು ಒಂದು ತೀರ್ಮಾನಕ್ಕೆ ಸರಕಾರದವರು ಬರದೇ ಇದ್ದಾಗ ನಾವು ಎಷ್ಟು ಬಜೆಟ್‌ನಲ್ಲಿ ಏನು ಸೇರಿಸಿದರೂ ಏನು ಪ್ರಯೋಜನ ? ಬಜೆಟ್ ತೆಗೆದುಕೊಂಡು ಜೇಸಿತುಪ್ಪ ಹಾಕಿಕೊಂಡಂ ನೆಕ್ಕೋಣವೇ ? ಜನರಿಗೆ ಏನು ಹೇಳೋಣ ? ಜನರಿಗೆ ಬಜೆಟ್ ಬಜೆಟ್ ಎಂದರೆ ಅವರು ಬಡಿಗೆ ತೆಗೆದುಕೊಳ್ಳುತ್ತಾರೆ. ಅವರು ಬಜೆಟ್ ಕೇಳುವುದಿಲ್ಲ. ನಾನಂ ಹಿಂದೇನೂ ಈ ಪ್ರಶ್ನೆ ಕೇಳಿದ್ದೆ. ಇವತ್ತು ಸರಕಾರದ ಅಭಿಪ್ರಾಯ ಏನು ? ಖಚಿತವಾಗಿ ಯಾವ ಯೋಜನೆ ಮಾಡಬೇಕು ? ಇವತ್ತು ಮಾಲತಿಹಳ್ಳಿ ರಿಸರ್ವಾಯರ್‌ನಿಂದ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ೨೩ ಸಾವಿರ ಎಕರೆ ಮುಳುಗಡೆಗೆ ಬರುತ್ತದೆ. ವಾರಾಹಿಯಲ್ಲಿ ಮುಳುಗಡೆ ಆಯಿತು. ಚಕ್ರಾ ಮತ್ತು ಸಾವೆಹಕ್ಲ ಯೋಜನೆಗಳಲ್ಲಿ ಮಲೆನಾಡಿನ ಬಹಳಷ್ಟು ಭಾಗ ಮುಳುಗಡೆಯಾಗಿದೆ. ಕೆಲವು ಭಾಗ ಮುಳುಗಡೆ ಆಗುತ್ತದೆ ಎಂದಾಗ ಸಹಜವಾಗಿ ಸಂಬಂಧಪಟ್ಟವರು ಆಕ್ಷೇಪ ಎತ್ತುತ್ತಾರೆ. ಮೊದಲಿನಂತೆ ತಲೆಬಗ್ಗಿಸಿಕೊಂಡು ಇರುವುದಕ್ಕೆ ಜನ ತಯಾರಾಗಿಲ್ಲ. ಆದುದರಿಂದ ನಾನು

ದೇವೇಗೌಡರನ್ನು ತಮ್ಮ ಮಂಡಲಿಕ ಪ್ರಾರ್ಥನೆ ಮಾಡಿಕೊಳ್ಳುವುದು, ಇದಕ್ಕೆ ಒಂದು ಸ್ಪಷ್ಟವಾದ ರೂಪವನ್ನು ಕೊಡುವುದಕ್ಕೆ ತಾವು ಪ್ರಯತ್ನ ಪಡಿ. ಇದು ನಿಮ್ಮ ಕೈಯಲ್ಲಿ ಆಗುವ ಕೆಲಸ. ನೀವು ಮನಸ್ಸು ಮಾಡಿದರೆ ಇದಕ್ಕೆ ಖಚಿತ ರೂಪ ಕೊಡಬಹುದು, ಕೊಡುವ ದಾರಿಯಲ್ಲಿ ನೀವು ಯೋಚನೆ ಮಾಡಬೇಕು. ಮಾನ್ಯ ಕೋಳಿವಾಡರು ಹೇಳಿದಹಾಗೆ ಮಂಳಂಗಡೆ ಪ್ರಶ್ನೆ ದೊಡ್ಡದಾಗಿ ಬಾಧಿಸದಿರುವ ರೀತಿಯಲ್ಲಿ ಕ್ರಿಸ್ಟ್‌ಗೇಟ್ ಹಾಕಿ, ಹೈಲೆವೆಲ್ ಲಿಫ್ಟ್ ಇರಿಗೇಷನ್ ಮಾಡಿ, ಕೆನಾಲ್ ತೆಗೆಯುವುದು ಸಾಧ್ಯ ಇದ್ದರೆ. ಅದರಿಂದ ಮ್ಯಾಕ್ಸಿಮಮ್ ಆಗಿ, ಶಿವಮೊಗ್ಗ ಹೊನ್ನಾಳಿ ಹಾಗೂ ಧಾರವಾಡ ತಾಲ್ಲೂಕುಗಳಿಗೆ ಮ್ಯಾಕ್ಸಿಮಮ್ ಆಗಿ ಇರಿಗೇಷನ್ ಕೊಡುವುದಕ್ಕೆ ಸಾಧ್ಯ ಇದೆ. ಸರಕಾರ ನಿಜವಾಗಿ ಏನಾದರೂ ಮಾಡಬೇಕೆಂದು ಇದ್ದರೆ ಈ ನಿರ್ಧಾರ ತೆಗೆದುಕೊಂಡರೆ ಮಾತ್ರ ಇದಕ್ಕೆ ಸ್ಪಷ್ಟ ರೂಪ ಬರುತ್ತದೆಯೇ ಹೊರತು, ಮಾಲತಿ ರಿಸರ್ವಾಯರ್, ಅದು ಇದು ಹೇಳಿ, ಎಲ್ಲಾ ಕನ್‌ಫ್ಯೂಸ್ ಮಾಡಿ ಇಟ್ಟುಕೊಂಡುಬಿಟ್ಟರೆ, ಇದಕ್ಕೆ ಕ್ಲಿಯರೆನ್ಸ್ ಸಿಗುವುದು ಕಷ್ಟ. ಸಬ್‌ಮರ್ಷನ್ ಎಲ್ಲಾ ಕ್ಲಿಯರ್ ಆಗಬೇಕು. ಫಾರೆಸ್ಟ್ ಎಷ್ಟು ಹೋಗುತ್ತದೆ ಎಂದರೆ ೧೭ ಸಾವಿರ ಎಕರೆ ಫಾರೆಸ್ಟ್ ಲ್ಯಾಂಡ್ ಇದೆ. ೨೭೧೪ ಎಕರೆ ಗಾರ್ಡನ್ ಲ್ಯಾಂಡ್ ಇದೆ. ಹೀಗಿರುವುದರಿಂದ ಇದು ಎಷ್ಟೋ ದಿವಸ ನೆನೆಗುದಿಯಲ್ಲಿ ಬೀಳುತ್ತದೆ. ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್ ಮಂತ್ರೊಂದರಿಂದ ಎಲ್ಲಾ ಇದಕ್ಕೆ ಅಂಟಿಕೊಂಡು ಬಿಡುತ್ತದೆ. ಆದುದರಿಂದ ದಯವಿಟ್ಟು ಸಬ್‌ಮರ್ಷನ್ ಪ್ರಶ್ನೆ ದೊಡ್ಡದಾಗಿ ಬರದೇ ಇರುವ ರೀತಿಯಲ್ಲಿ ಯಾವ ಪ್ರಾಜೆಕ್ಟ್ ಮಾಡುವುದರಿಂದ ಮ್ಯಾಕ್ಸಿಮಮ್ ಇರಿಗೇಷನ್ ಆಗುತ್ತದೆ ಎಂಬ ದೃಷ್ಟಿಯಲ್ಲಿ ಇದನ್ನು ನೋಡಬೇಕು. ಈಗ ಇರತಕ್ಕಂಥ ಗಾಜನೂರು ಡ್ಯಾಮ್ ಏನಿದೆ ಅದಕ್ಕೆ ಅವಶ್ಯೇ ಕ್ರಿಸ್ಟ್ ಗೇಟ್ ಇಡಬೇಕಾಗಿತ್ತು. ೨೦೦-೩೦೦ ಎಕರೆ ಹೆಚ್ಚು ಸಬ್‌ಮರ್ಷನ್ ಬರುತ್ತಿತ್ತು, ನನಗೆ ತೀರ ಇಂಟ್ರೆಸ್ಟ್ ಆ ಕಾಲದಲ್ಲಿ ನಡೆದುಹೋದುದಕ್ಕೆ ನಾನು ಯಾರ ಮೇಲೂ ಆರೋಪವನ್ನು ಮಾಡುತ್ತಿಲ್ಲ. ಆ ಯಾರದ್ದೋ ಒಂದೆರಡು ಮೂರು ಜನರ ಜಮೀನನ್ನು ಉಳಿಸುವುದಕ್ಕೆ ಕ್ರಿಸ್ಟ್ ಗೇಟ್ ಹಾಕುವ ಕೆಲಸ ಬದಿಗಿಟ್ಟರು. ಒಬ್ಬಿಬ್ಬರ ಜಮೀನು ಉಳಿಸುವುದಕ್ಕೆ ಅವತ್ತು ಮಾಡಬೇಕಾದಂಥ ಹಾಗೂ ಗಾಜನೂರು ಡ್ಯಾಮ್‌ನ ಪಾರ್ಟ್ ಆಂಡ್ ಪಾರ್ಸೆಲ್ ಆಗಿದ್ದಂಥ ಕ್ರಿಸ್ಟ್‌ಗೇಟ್ ಹಾಕುವ ಕೆಲಸ ನಿಂತು ಹೋಯಿತು ಇದೇನೂ ಹೊಸದಾಗಿ ಮಾಡಿದ್ದಲ್ಲ. ಆದರೆ ಅದು ಇರಲೇ ಇಲ್ಲವೆಂಬ ಸ್ಥಿತಿಗೆ ಇವತ್ತಿನ ದಿವಸ ಸರಕಾರದ ಕಡತಗಳನ್ನು ತಯಾರು ಮಾಡುವ ಕೆಲಸ ನಡೆದಿದೆ. ಆದುದರಿಂದ ಇದನು ಮೊದಲು ಪರೀಕ್ಷೆ ಮಾಡಿ ದಯವಿಟ್ಟು ಖಚಿತವಾಗಿ ಇದನ್ನು ಮಾಡುವುದಕ್ಕೆ ಸಾಧ್ಯವೇ. ಈ ಒಂದು ಯೋಜನೆಯಿಂದ ಮುಳುಗಡೆ ಎಷ್ಟಾಗುತ್ತದೆ, ನೀರಾವರಿ ಎಷ್ಟಾಗುತ್ತದೆ ಎಂಬುದನ್ನು ನೋಡಬೇಕು ಈ ರೀತಿ ಮಾಡುವುದರಿಂದ ಏನೂ ನೀರಾವರಿಯಾಗುವುದಿಲ್ಲ, ಎಲ್ಲೋ ಒಂದು ಐದಾರು ಸಾವಿರ ಎಕರೆ ಮಾತ್ರ ನೀರಾವರಿಯಾಗುತ್ತದೆ ಎಂದರೆ ನಾವು ಅದನ್ನೇ ಹಿಡಿದುಕೊಂಡು ಕಂಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಮ್ಯಾಕ್ಸಿಮಮ್ ಬೆನಿಫಿಟ್ ಆಗಿ, ಮಿನಿಮಮ್ ತೊಂದರೆಗಳು ಆಗುತ್ತದೆ ಎಂದಾದರೆ. ಅಂತಹ ಯೋಜನೆ ಬಗ್ಗೆ ತೀರ್ಮಾನ ಮಾಡಿ. ಅದನ್ನು ಬಿಟ್ಟು ಇದೆಲ್ಲ ಚಿತ್ರವನ್ನೂ ಕೊಟ್ಟುಬಿಟ್ಟು, ಹೀಗೆ ಮಾಡಿದರೆ ಹಂಗಾಗುತ್ತದೆ, ಹಂಗೆ ಮಾಡಿದರೆ ಹಿಂಗಾಗುತ್ತದೆ, ಇದನ್ನು ಮಾಡಿದರೆ ಇಷ್ಟು ಮುಳುಗಡೆಯಾಗುತ್ತದೆ, ಇದನ್ನು ಮಾಡುವುದಾದರೆ ಅದು ಕೇಂದ್ರ ಸರಕಾರಕ್ಕೆ ಹೋಗಬೇಕಾಗುತ್ತದೆ ಎಂದು ಹೀಗೆ ಹೇಳುತ್ತಾ ಕುಳಿತುಕೊಂಡರೆ ನಾವು ತೃಪ್ತಿಪಟ್ಟುಕೊಳ್ಳುವುದು ಸಾಧ್ಯವಿಲ್ಲ. ಇದರ ಬಗ್ಗೆ ಖಚಿತವಾದ ನಿರ್ಧಾರ ಮಾಡಿ. ನಾನು ಪಾಯಿಂಟ್ ಔಟ್ ಆಗಿ ಮಾನ್ಯ ದೇವೇಗೌಡರಿಗೆ ಕೇಳುವುದು ಎಂದರೆ, ಕೋಳಿವಾಡ್‌ರವರು ಹೇಳಿದಂತೆ ಗಾಜನೂರು ಡ್ಯಾಮ್‌ಗೆ ಕ್ರಿಸ್ಟ್ ಗೇಟ್ ಹಾಕತಕ್ಕಂಥಾದ್ದು ಒಂದು ದೊಡ್ಡ ಸಮಸ್ಯೆ ಅಲ್ಲ. ಇವತ್ತು ಅದನ್ನಾ ಸೂಕ್ತವಾಗಿ ಮಾಡಬಹುದು. ಅದರಿಂದ ಮುಳುಗಡೆ ಆಗತಕ್ಕಂಥಾದ್ದು ಬಹಳ ಕಡಿಮೆ ಎಕರೆ ಜಮೀನು. ಇದರಿಂದ ಒಂದು ಜನಾಂಧೋಲನವನ್ನು ಎದುರಿಸತಕ್ಕಂಥ ಪ್ರಶ್ನೆ ಬರುವುದಿಲ್ಲ. ೨೦೦- ೦೦ ಎಕರೆ ಮಾತ್ರ ಮುಳುಗಡೆಗೆ ಬರತಕ್ಕಂಥಾದ್ದು. ಕ್ಲಿಯರೆನ್ಸ್ ಕೂಡಾ ಸುಲಭವಾಗುತ್ತದೆ. ಅಲ್ಲಿಂದ ಹೈಲೆವೆಲ್ ಕೆನಾಲ್ ಮಾಡಿ, ಲಿಫ್ಟ್ ಇರಿಗೇಷನ್ ಮಾಡಬಹುದು. ಫ್ಲೋ ಇರಿಗೇಷನ್ ಮಾಡುವುದಕ್ಕೆ ಆಗುವುದಿಲ್ಲ ಲಿಫ್ಟ್ ಇರಿಗೇಷನ್ ಮಾಡಿ ಕೆನಾಲ್ ತೆಗೆದುಕೊಂಡು ಹೋದರೆ ಮ್ಯಾಕ್ಸಿಮಮ್ ಎಷ್ಟು ಎಕರೆಗೆ ಬೆನಿಫಿಟ್ ಆಗುತ್ತದೆ ಎಂಬ ವಿಚಾರವನ್ನು ಖಚಿತಗೊಳಿಸಿ ಹೇಳಿದರೆ ನಮ್ಮದೂ ಕೂಡಾ ಒಂದು ನಿಲುವು ತೆಗೆದು ಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇಲ್ಲದಿದ್ದರೆ ನಾವು ವ್ಯಾಕ್ಯೂಮ್‌ನಲ್ಲಿ, ಗೊಂದಲಮಯವಾದ ಚಿತ್ರದಲ್ಲಿ ಏನು ಮಾಡಬೇಕು ಬಿಡಬೇಕು ಎಂಬುದೂ ಕೂಡಾ ಕಷ್ಟವಾಗುತ್ತದೆ.

ಸುಪ್ಪನೆ ಇಂಥಾದ್ದು ಮಾಡಿ ಆಕಾಶಕ್ಕೆ ಏಣಿ ಹಾಕಿ ಎಂದು ಹೇಳಿ ತೃಪ್ತಿ ಪಟ್ಟುಕೊಂಡು ಹೋಗುವುದಕ್ಕೆ ಅಲ್ಲ ನಾವಿಲ್ಲಿ ಬಂದಿರುವುದು. ಸರ್ಕಾರಕ್ಕೆ ನಾವು ನಿರ್ದಿಷ್ಟವಾದ ಸಲಹೆ ಸೂಚನೆಗಳನ್ನು ಕೊಡಬೇಕು. ಸರ್ಕಾರ ನಮಗೆ ಆ ಬಗ್ಗೆ ಸ್ಪಷ್ಟವಾದ ಒಂದು ಉತ್ತರ ಕೊಟ್ಟು ಆದರ ಜೊತೆಗೆ ಸ್ಪಷ್ಟ ಚಿತ್ರಪಟವನ್ನು ನಮಗೆ ಕೊಟ್ಟರೆ ಮಾತ್ರ ಅದು ಸಾಧ್ಯ. ನಾವು ಹೇಳತಕ್ಕಂಥ ಮುಖ್ಯವಾದ ಅಂಶಗಳ ಬಗ್ಗೆ ಗಾಜನೂರು ಡ್ಯಾಮ್‌ಗೆ ಕ್ರಸ್ಟ್ ಗೇಟ್ಸ್ ಅಳವಡಿಸಿ ರಿಜರ್‌ವಾಯರ್ ಕೆಪಾಸಿಟಿಯನ್ನು ಜಾಸ್ತಿ ಮಾಡಿ ಇದರಿಂದ ಒಂದು ಹೈ ಲೆವೆಲ್ ಕೆನಾಲ್ ಲಿಫ್ಟ್ ಇರಿಗೇಶನ್ ಮಾಡಿ ಮ್ಯಾಗ್ನಿಮಂಪ್ ಕೆನಾಲ್ಸ್‌ನ್ನು ಮಾಡಿ ಕೊಡುವುದಕ್ಕೆ ಸಾಧ್ಯವಿದೆ. ತಾವು ತಕ್ಷಣ ಇದನ್ನು ಕಾರ್ಯಗತ ಮಾಡುತ್ತೀರಾ ಎನ್ನುವ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇವೆ.

ಶ್ರೀ ಬಿ. ಜೆ ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಇದುವರೆಗೆ ಮಾನ್ಯ ಸದಸ್ಯರಾದ ಕೋಳಿವಾಡ್ ರವರು ಹಾಗೂ ಶ್ರೀ ಕೆ. ಎಚ್. ಶ್ರೀನಿವಾಸ್‌ರವರು ಈ ಅಪ್ಪರ್ ತುಂಗಾ ಪ್ರಾಜೆಕ್ಟ್ ಬಗ್ಗೆ ಸವಿಸ್ತಾರವಾಗಿ ತಿಳಿಸಿದ್ದಾರೆ. ಈ ಪ್ರಾಜೆಕ್ಟ್‌ನ ಪ್ರಿಪೇರ್ಡ್ ರಿಪೋರ್ಟ್ ಎಂ. ವೈ. ಪಿ. ಕೆ. ಪುಟ ೯೫ ೧೦೦ ರಲ್ಲಿ ಇದೆ. ಹೊಸದಾಗಿ ಏನೂ ಇಲ್ಲ. ಗಾಜನೂರು ಪ್ರಾಜೆಕ್ಟ್ ಮಾಡುವುದಾದರೆ ಧಾರವಾಡ ಜಿಲ್ಲೆಯ ಕೆಲವು ಭಾಗಗಳಾದ ಹಿರೇಕೆರೂರು, ರಾಣಿ ಬೆನ್ನೂರು ಕೊಪ್ಪಳ, ಹಾಗೂ ಮುಂಡರಗಿಯ ಸ್ವಲ್ಪ ಭಾಗ. ಹೊನ್ನಾಳಿ, ಹರಿಹರದ ಸ್ವಲ್ಪ ಭಾಗಕ್ಕೆ ನೀರು ಬಿಡಬಹುದು. ಇದರಲ್ಲಿ ಹೆಚ್ಚಿನ ಭಾಗ ಧಾರವಾಡ ಜಿಲ್ಲೆಗೆ ಹೋಗುತ್ತದೆ. ಈ ಭಾಗದ ರಾಣೆಬೆನ್ನೂರು, ಮುಂಡರಗಿ ಹಾಗೂ ಕೊಪ್ಪಳ, ಭಾಗಗಳನ್ನು ಹಿಂದೆ ಬರಗಾಲ ಪೀಡಿತ ಪದೇಶವೆಂದು ಘೋಷಿಸಿದ್ದರು. ಇವರ ಒಂದು ಮೂಲ ಉದ್ದೇಶ ಈ ಭಾಗಕ್ಕೆ ನೀರು ಕೊಡಬೇಕೆನ್ನುವುದು. ಅದಕ್ಕೆ ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೆ ಕ್ರಸ್ಟ್ ಗೇಟ್ಸ್ ಹಾಕುವುದು ಪ್ರಾಜೆಕ್ಟ್‌ನಲ್ಲಿಯೇ ಸೇರಿಸಿತ್ತು. ಮಾನ್ಯ ಸದಸ್ಯರಾದ ಶ್ರೀನಿವಾಸ್‌ರವರು ಹೇಳಿದ ಹಾಗೆ ಕ್ರಸ್ಟ್ ಗೇಟ್ಸ್ ಹಾಕಿದ್ದು ಬಹಳ ಮುಖ್ಯ. ಕಾವೇರಿ ನದಿಯ ಭಾಗದ ಜನರು ಹಾಗೂ ಅಲ್ಲಿರತಕ್ಕಂಥ ಶಾಸಕರು ಈಗ ತಯಾರಾಗಿದ್ದಾರೆ. ಅಲ್ಲಿ ಏನಾದರೂ ಸ್ವಲ್ಪ ವೈತ್ಯಾಸವಾದರೂ ಒಗ್ಗಟ್ಟಾಗುತ್ತಾರೆ. ಅವರಿಗೆ ನೀರಿನಿಂದ ಆಗುವ ಅನುಕೂಲ ಗೊತ್ತಿದೆ. ನಮ್ಮ ಜನರಿಗೆ ಹಾಗೂ ಶಾಸಕರಿಗೆ ಆ ಅನುಭವ ಇನ್ನೂ ಗೊತ್ತಿಲ್ಲ, ನಮಗೆ ಭದ್ರಾ ಪ್ರಾಜೆಕ್ಟ್ ಬರುವುದಕ್ಕಿಂತ ಮುಂಚಿತವಾಗಿ ನಮ್ಮ ಜನ ಆ ಪ್ರಾಜೆಕ್ಟ್ ಬಂದರೆ ಎಲ್ಲಿ ನಮ್ಮ ಜಮೀನು ಮುಳುಗಿ ಹೋಗುತ್ತದೆಯೋ. ಎಲ್ಲಿ ನೀರು ಬಂದು ಬಿಡುತ್ತದೆಯೋ ಏನಾಗಿ ಬಿಡುತ್ತದೆಯೋ ಎನ್ನುವ ಜನರಿದ್ದರು. ಆಗಿನ ಜನರಿಗೆ ನೀರು ಬೇಡವಾಗಿತ್ತು. ಈಗಲೂ ಸಹ ಧಾರವಾಡ ಜಿಲ್ಲೆಯ ಕೆಲವು ಭಾಗದ ಜನರಲ್ಲಿ ಈ ಭಾವನೆ ಇದೆ. ಅವರಿಗೆ ನೀರು ಬೇಡ ಆದರೆ ನಮ್ಮ ಭಾಗದ ಜನರಿಗೆ ನೀರು ಬಂದ ಮೇಲೆ ಆನಂದವಾಗಿದ್ದಾರೆ. ನಮ್ಮ ಭಾಗದ ರೈತರು ಅನುಕೂಲಸ್ಥರಾಗಿದ್ದಾರೆ ಏನೋ ಅಲ್ಪ ಸ್ವಲ್ಪ ಅನ್ನ ಬಟ್ಟೆ ಕಾಣುವುದಕ್ಕೆ ಅನುಕೂಲವಾಗಿದೆ. ಆದರೆ ಧಾರವಾಡ ಜಿಲ್ಲೆಯ ಹಿರೇಕೆರೂರು ರಾಣೆಬೆನ್ನೂರು ಮುಂಡರಗಿಯ ಸ್ವಲ್ಪ ಭಾಗ ಮತ್ತು ಕೊಪ್ಪಳದ ಸ್ವಲ್ಪ ಭಾಗಕ್ಕೆ ಅನುಕೂಲವಾಗುತ್ತದೆ ಈ ಹಿಂದೆ ಸುಪಾರು ೨೦ ಟಿ. ಎಂ. ಸಿ. ನೀರನ್ನು ಅಪ್ಪರ್ ತುಂಗಾ ಪ್ರಾಜೆಕ್ಟ್‌ಗೆ ಜಡಬೇಕೆಂಬ ಯೋಚನೆ ಇತ್ತು. ಆದರೆ ಅದನ್ನು ಈಗ ಬರೇ ೮ ಟಿ ಎಂ ಸಿ ಗೆ ಇಳಿಸಿದ್ದಾರೆ. ಕಾರಣವೇನೋ ಗೊತ್ತಿಲ್ಲ. ಮಾನ್ಯ ಸಚಿವರು ಈ ಬಗ್ಗೆ ವಿಷದವಾಗಿ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಕೊಪ್ಪಳ, ರಾಣೆಬೆನ್ನೂರು ಹಾವೇರಿ ಹಾಗೂ ಶಿರಹಟ್ಟಿ ಈ ಭಾಗದಲ್ಲಿ ಸುಮಾರು ೩ ಲಕ್ಷ ೨೦ ಸಾವಿರ ಎಕರೆ ಜಮೀನಿಗೆ ನೀರು ಕೊಡಬೇಕೆನ್ನುವುದು ಇದೆ. ಆದರೆ ಈಗ ೫೦ ಸಾವಿರದ ೫೦೦ ಎಕರೆಗಳಿಗೆ ಮಾತ್ರ ಇರಿಗೇಶನ್ ಕೊಡಬೇಕೆಂದು ಇದರಲ್ಲಿ ಇದೆ. ಆದರೆ ಒಟ್ಟು ವಿರಿಯಾ ಅಪ್ಪರ್ ತುಂಗಾ ಪ್ರಾಜೆಕ್ಟ್‌ನಲ್ಲಿ ಸುಮಾರು ೪ ಲಕ್ಷ ೧೦ ಸಾವಿರ ಎಕರೆಗಳಿಗೆ ನೀರು ಕೊಡಬೇಕೆನ್ನುವ ಸ್ಕೀಮ್ ತಯಾರಾಗಿದೆ. ಬಹುಶಃ ಮಾನ್ಯ ಮಂತ್ರಿಗಳು ಮನಸ್ಸು ಮಾಡಿದರೆ ಸ್ಕೀಮ್ ಓಡಬಹುದು. ಮಾನ್ಯ ಸಚಿವರಾದ ಶ್ರೀಮಾನ್ ದೇವೆಗೌಡರು ಹಿಂದಿನ ಸ್ಕೀಮ್ ಪ್ರಕಾರ ಹೋದರೆ ಬಹುಶಃ ಆ ಸ್ಕೀಮ್ ಇಂಪ್ಲಿಮೆಂಟ್ ಮಾಡಲು ಕೇವಲ ೨೫೦ ಕೋಟಿ ರೂಪಾಯಿಗಳು ಮಾತ್ರ ಬೇಕಾಗುತ್ತದೆ. ಇವತ್ತು ಸುಮಾರು ೨ ಲಕ್ಷ ೮೦ ಸಾವಿರ ಎಕರೆಗಳಿಗೆ ನೀರು ಕೊಡತಕ್ಕಂಥ ಪ್ರಾಜೆಕ್ಟ್ ಇಡೀ ಇಂಡಿಯಾ ದೇಶದಲ್ಲಿಯೇ ಯಾವುದೂ ಇಲ್ಲ ಎಂದು ನಾನು ಹೇಳುತ್ತೇನೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಇವತ್ತು ಕೂಡ ನೀರು ಕಂಡು ಅದರ ಅನುಕೂಲ ಪಡೆದುಕೊಂಡಿರತಕ್ಕಂಥ

ಜನರಿಗೆ ಸ್ವಲ್ಪ ವೆತ್ಯಾಸವೇನಾದರೂ ಆದರೆ ಆ ಜನರು ಬೇಗ ಸಿಟ್ಟು ಮಾಡಿಕೊಳ್ಳುತ್ತಾರೆ. ಆದರೆ ನಮ್ಮ ರೈತರು ಸಿಟ್ಟು ಮಾಡಿಕೊಳ್ಳದೆ ಪೇಟಾ ಹಾಕಿಕೊಂಡು ಬರುತ್ತಾರೆ. ಇಂತಹ ಪರಿಸ್ಥಿತಿಗೆ ತಾವು ಏಡೆ ಕೊಡಬಾರದು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಹಿಂದಿನ ಶಾಸಕರು ಕಷ್ಟಪಟ್ಟು ಈ ಪ್ರಾಜೆಕ್ಟ್‌ನ್ನು ಬಡ್ಜೆಟ್‌ಗೆ ಸೇರಿಸುವುದಕ್ಕೆ ಪ್ರಯತ್ನ ಪಟ್ಟರು. ಶಾಸಕರ ಮೇಲೆ ಮಾಡುವ ಸಿಟ್ಟನ್ನು ತಪ್ಪಿಸಿಕೊಳ್ಳಲು ಅವರು ಈ ಕೆಲಸ ಮಾಡಿದರು. ಆದರೆ ನಾನು ಸದನದಲ್ಲಿ ಒಂದು ವಿಷಯವನ್ನು ಹೇಳುತ್ತಿದ್ದೇನೆ. ನಮ್ಮ ಭಾಗದ ರೈತರು ವಿಧಾನ ಸೌಧ ಚಲೋ ಹೋಗಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಅವರು ಬರದಂತೆ ತಾವು ನೋಡಿಕೊಳ್ಳಬೇಕು. ಅವರಿಗೆ ನೀರಾವರಿ ಸೌಲತ್ತುಗಳನ್ನು ಕೊಟ್ಟು ಅವರ ಜಮೀನುಗಳಿಗೆ ನೀರು ಒದಗಿಸಿಕೊಡಬೇಕು. ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದು ಇಷ್ಟೇ. ಆ ಭಾಗದ ಶಾಸಕರು ಹೋರಾಟ ಮಾಡಿ ಬಡ್ಜೆಟ್‌ನಲ್ಲಿ ಸೇರಿಸಿದ್ದಾರೆ. ಆದರೆ ಇದುವರೆವಿಗೂ ಆ ಭಾಗದ ಜನರಿಗೆ ನೀರು ಕೊಟ್ಟಿಲ್ಲ.

ಇವತ್ತು ತಾವು ಮನಸ್ಸು ಮಾಡಬೇಕು. ಒಂದೊಂದು ಭಾಗಕ್ಕೂ ಎಷ್ಟೆಷ್ಟು ನೀರು ಕೊಡಬೇಕು ಅಂತ ಯೋಚಿಸಬೇಕು. ಈಗ ಅಪ್ಪರ್‌ಕೃಷ್ಣ ಬಗ್ಗೆನೆ ಹೇಳಬೇಕಾದರೆ ಹಿಳಸಾವಿರ ಎಕರೆ ನೀರು ಕೊಡುವಂಥಾದ್ದು, ಸ್ವಲ್ಪ ರಿಪೇರಿ ಮಾಡಿದರೆ ಸಾಕು. ಈ ದೊಡ್ಡ ಪ್ರೊಜೆಕ್ಟನ್ನು ಮುಗಿಸಲು ಕಂಕಣಲ್ಲಿ ಜೋಳಿಗೆ ಹಿಡಿದುಕೊಂಡು ಬೇಡಬೇಕು. ಕೇಂದ್ರದಿಂದಲೋ ರಾಜ್ಯದಿಂದಲೋ ಎಲ್ಲಿಂದಾದರೂ ಹಣ ತರಬೇಕು ರೈತರಾದರೂ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಎಕರೆಗೆ ಇಷ್ಟಿಷ್ಟು ಅಂತ ನೀವು ಹೇಳಿದರೂ ನಾವು ಕೊಡೋಕೆ ತಯಾರಿದ್ದೀವಿ. ದೇವೇಗೌಡರ ಜೋಬಿಗೆ ಎಷ್ಟಾದರೂ ಹಣ ಕೊಡಲು ನಾವು ಸಿದ್ಧರಿದ್ದೇವೆ. ರೈತರಿಗಿರುವ ಕಳಕಳಿಯನ್ನು ಪರಿಪೂರ್ಣ ಮಾಡಿಕೊಳ್ಳುವ ಶಕ್ತಿ ದೇವೇಗೌಡರಿಗೆ ಬರಲಿ ಕೆಲಸ ಮಾಡುವ ಇಂಜಿನಿಯರ್‌ಗಳಿಗೆ ಬುದ್ಧಿ ಬರಲಿ ಎಂದು ಬೇಡಿಕೊಂಡು ಇಷ್ಟು ಹೇಳಲು ಅವಕಾಶ ಕೊಟ್ಟ ತಪ್ಪಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಸನ್ಮಾನ್ಯ ಅಧ್ಯಕ್ಷರೇ. ಹೆಚ್ಚಿಗೆ ಮಾತನಾಡಲು ನಾನು ಇಷ್ಟಪಡುವುದಿಲ್ಲ. ಈ ಯೋಜನೆ ಪೂರ್ಣವಾದರೆ ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ರೈತರ ಬದುಕಿಗೆ ಸಂಜೀವಿನಿ ಕೊಟ್ಟಂತಾಗುತ್ತದೆ. ತುಂಗಾ ಮೇಲ್ದಂಡೆ ಯೋಜನೆ ಬಗ್ಗೆ ಸರ್ವೆ ನಡೆದಂಥ ಕಾಲದಲ್ಲಿ ಹಿಂದೆ ಶಿಕಾರಿಪುರ ತಾಲೂಕಿನ ಕೆಲವು ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿತ್ತು. ಅಲ್ಲಿ ಮಾಸೂರು ಹತ್ತಿರ ಒಂದು ಕೆನಾಲ್ ತೆಗೆದರೆ ಹೊನ್ನಾಳಿ ಮಂಡಲಕ್ಕೆ ನೀರು ಸಿಗುವ ಅವಕಾಶ ಇತ್ತು. ಇದರ ಬಗ್ಗೆ ಹಿಂದೆ ಸರ್ವೆಯೂ ಆಗಿತ್ತು. ಈ ಯೋಜನೆ ಪೂರ್ಣಗೊಂಡರೆ ತಮಗೆ ಅನುಕೂಲವಾಗುತ್ತದೆಂದು ನನ್ನ ತಾಲ್ಲೂಕಿನ ಜನ ನಂಬಿಕೊಂಡಿರುವ ಹಿನ್ನೆಲೆಯಲ್ಲಿ ಶಿಕಾರಿಪುರ ತಾಲೂಕಿನ ಕೆಲವು ಹಳ್ಳಿಗಳು ಈಗ ಹೇಗೆ ಬಿಟ್ಟು ಹೋಗಿವೆ ಎಂಬುದನ್ನು ಹೇಳಬೇಕು ಮಂತ್ರಿಗಳು ಹಿಂದೆ ಸರ್ವೆ ಮಾಡಿರುವ ದಾಖಲೆಗಳನ್ನು ತೆಗೆಸಲಿ. ನಮ್ಮ ಹತ್ತಿರ ಇರುವ ದಾಖಲಾತಿಗಳನ್ನೂ ನಾವು ಕೊಡುತ್ತೇವೆ. ಈ ಸಲವಾದರೂ ಶಿಕಾರಿಪುರ ತಾಲೂಕಿನ ಹಳ್ಳಿಗಳನ್ನು ಇದರಲ್ಲಿ ಸೇರಿಸಿಕೊಳ್ಳಬೇಕೆಂದು ಮಾನ್ಯ ದೇವೇಗೌಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್ .ಡಿ ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಹಿರಿಯರಾದ ಶ್ರೀ ಕೆ. ಹೆಚ್ ಪಾಟೀಲರು ಹೇಮಾವತಿ ಬೇಗ ಪೂರ್ಣಗೊಳಿಸಿದಂತೆ ಇದನ್ನೂ ಮುಗಿಸಿಕೊಡುತ್ತೇನೆ ಎಂದು ಹೇಳಿ ಎಂದರು. ನಾನು ಈ ಸಭೆಗೆ ತಿಂಡಿ ಬರದೇ ಹೋಗಿದ್ದರೆ ಆ ಮಾತು ಈಗ ಹೇಳಿಬಿಡುತ್ತಿದ್ದೆ. ಆದರೆ ನಾನು ರಾಜಕೀಯದಿಂದ ಈಗ ನಿವೃತ್ತನಾಗುವುದಿಲ್ಲ. ಮುಂದೆಯೂ ಈ ಸದನಕ್ಕೆ ಬರುವ ಧೈರ್ಯ ನನಗಿದೆ. ಆ ಕಡೆ ಕೂರ ಬಹುದು, ಇಲ್ಲ ಈ ಕಡೆ ಕೂರಬಹುದು, ಪ್ರತ್ಯಾಸ ಅಷ್ಟೆ. ಒಂದು ಪಕ್ಷ ನಾಳೆ ನಾನು ಆ ಕಡೆ ಕೂತಾಗ ಈ ಪ್ರಶ್ನೆ ಬಂದಾಗ ಮಾತನಾಡದಿರಲು ನನ್ನ ಕೈಲಿ ಸಾಧ್ಯವಿಲ್ಲ. ಆದ್ದರಿಂದ ಇಷ್ಟು ಮಾತ್ರ ಹೇಳಬಲ್ಲೆ : ನೀವು ಎತ್ತರದ ಸ್ಥಾನದಲ್ಲಿ ಕೂತಿದ್ದೀರಿ. ನಮಗೆ ಮಾರ್ಗದರ್ಶನ ಕೊಡುವುದಾದರೆ ಅದನ್ನು ಸ್ವೀಕರಿಸುತ್ತೇನೆ. ಆದರೆ ಒಂದು ಮಾತು ಹೇಳುತ್ತೇನೆ ನೀವೇ ಹಿಂದೆ ಈ ಸಭೆಯ ಸದಸ್ಯರಾಗಿ, ದೇವರಾಜ ಅರಸರ ಕಾಲದಲ್ಲಿ ಈ ಬಗ್ಗೆ ಅಪರ ಗಮನ ಸೆಳೆದಿದ್ದಿರಿ. ಅದು ಚರ್ಚೆಯಾಗಿದೆ. ಪ್ರೊಸೀಡಿಂಗ್ಸನ್ನು ಓದಿದ್ದೇನೆ. ಟ್ಟರ್‌ಲ್ಲಿ ನಾನು ಕಾಂಗ್ರೆಸ್ ಬಿಟ್ಟಾದ ಮೇಲೆ ನೀರಾವರಿಗೆ ಯಾರ್ಯಾರು ಎಷ್ಟೆಷ್ಟು ಅನ್ಯಾಯ ಮಾಡಿದ್ದಾರೆ ಎಂದು ಕುತೂಹಲದಿಂದ ಪ್ರೊಸೀಡಿಂಗ್ಸನ್ನು ತರಿಸಿ ಎರಡು ಮೂರು ದಿನದಿಂದ ಓದಿದೆ ತಾವು ತುಂಬಾ ಆಸಕ್ತಿ ವಹಿಸಿದ್ದೀರಿ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ವಿನೋದಕ್ಕಾಗಿ ಹೇಳುತ್ತೇನೆ. ನಮ್ಮಲ್ಲಿ ತಮಗೆ ಗೊತ್ತಿದ್ದ ಹಾಗೆ ಗಿರಿಯಪ್ಪ ಅನ್ನೋ ವಕೀಲರಿದ್ದರು. ಅವರು ಯಾವುದೋ ಹೊತ್ತಿನಲ್ಲಿ ಏನೋ ಮಾತನಾಡುತ್ತಿದ್ದರು. ನಾವು ಆಗ ಇದೇನಂ ವ್ಯತಿರಿಕ್ತವಾಗಿ ಮಾತಾಡುತ್ತಿದ್ದೀರಲ್ಲ ಎಂದಾಗ ನೋಡಿ ಪ್ರತಿವಾದಿಗಳು ಹೇಗೆ ಮಾತನಾಡುತ್ತಾರೆಂದು ನಾನು ಈಗ ಮಾತನಾಡಿದ್ದು' ಎಂದು ಹೇಳುತ್ತಿದ್ದರು. ಈಗ ದೇವೇಗೌಡರು ಹಾಗೆ ಮಾತಾಡುತ್ತಿದ್ದಾರೆ. ಅದು ನಮಗೆ ಹೇಗೆ ಗೊತ್ತಾಗಬೇಕಂ.

ಶ್ರೀ ಹೆಚ್.ಡಿ. ದೇವೇಗೌಡ.—ನಾನು ಹೇಳಿದ್ದೇನೆಂದರೆ ತಾವು ಎಷ್ಟೊಂದು ಆಸಕ್ತಿವಹಿಸಿದ್ದೀರಿಂದು, ಈಗಷ್ಟೆ ಅಲ್ಲ, ಹಿಂದೆಯೂ ಇಷ್ಟೇ ಆಸಕ್ತಿ ನಿಮಗಿತ್ತು, ಎಂದು ಅಷ್ಟೇಅಲ್ಲ, ಮಾನ್ಯ ಶ್ರೀ ಕೆ.ಹೆಚ್. ಶ್ರೀನಿವಾಸ್ ಅವರು ಮಂತ್ರಿಗಳಾಂಥ ಕಾಲದಲ್ಲಿ ಎರಡು ಮೂರು ಲಿಫ್ಟ್ ಇರಿಗೇಷನ್ಸ್‌ಕೀಮ್‌ಗಳನ್ನು ಪ್ರಪೋಸ್ ಮಾಡಿ ಅವು ಸಣ್ಣವಾಗಿದ್ದರೂ ಮಾಡಬೇಕೆಂದು ಆಡಳಿತ ಮಂಜೂರಾತಿ ಕೊಡಿಸಂಪ ಮಟ್ಟಕ್ಕೂ ಹೋಗಿದ್ದರು. ಯಾವ ಕಡೆಯ ಸದಸ್ಯರೇ ಇರಲಿ, ಎಲ್ಲರಿಗೂ ಇದರಲ್ಲಿ ಆಸಕ್ತಿ ಇದೆ. ಯಾವುದೇ ಸರ್ಕಾರ ಅಧಿಕಾರದಲ್ಲಿರಬಹುದು, ಆಗಿನ ಸರ್ಕಾರಕ್ಕೂ ಆಸಕ್ತಿ ಇತ್ತು, ಈಗಿನ ಸರ್ಕಾರಕ್ಕೂ ಇದೆ ಎಂದು ಹೇಳುತ್ತಿದ್ದೇನೆ. ಒಂದು ವಿಷಯವನ್ನು ಈ ಸದನದಲ್ಲಿ ಹೇಳ ಬೇಕಾಗುತ್ತದೆ, ಏನೆಂದರೆ ೭೫೪ ಟಿಎಂಸಿ ನೀರಿನಲ್ಲಿ ೮ ಟಿಎಂಸಿ ಮಾತ್ರ ಇದಕ್ಕೆ ಇದೆ. ಗೊಂದಲ ಇರುವುದು ಇದರಲ್ಲಿ ಒಂದು ಭಾಗ. ಹಣಕಾಸಿನ ತೊಂದರೆಯಿಂದ ಒಂದು ಭಾಗ ಇದ್ದರೆ ೭೫೪ ಟಿಎಂಸಿ ನೀರಿನಲ್ಲಿ ೭೭೦ರಲ್ಲಿ ಆದ ನಿರ್ಣಯದಂತೆ ಧಾರವಾಡ ಜಿಲ್ಲೆಗಾಗಲೀ ಶಿವಮೊಗ್ಗ ಜಿಲ್ಲೆಗಾಗಲಿ ನೀರು ಬರುತ್ತಿಲ್ಲ ಎಂಬುದು ಅಲ್ಲ, ಬಳ್ಳಾರಿ ಜಿಲ್ಲೆಯಲ್ಲಿ ಸಿಂಗ್‌ಟಾಲೂರು ಎಂಬ ಬಳಿ ಒಂದು ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಯೋಜನೆ ಇತ್ತು. ಈ ವಿವರಣೆ ಏಕೆ ಕೊಡುತ್ತಿದ್ದೇನೆಂದರೆ ಸಭೆಯನ್ನು ಕನ್‌ಫ್ಯೂಸ್ ಮಾಡುವುದಕ್ಕಲ್ಲ. As per 1977 decision, only 8 TMC ft can be drawn out of 734 TMC ft and that too, that should be utilised only in Bellary District, Singtalur. ಸ್ವಾಮಿ, ಏನಾಗಿದೆ ಎಂದರೆ, ಕೃಷ್ಣಾ ಬೇಸಿನ್ ನೀರು ಉಪಯೋಗ ಮಾಡಿಕೊಳ್ಳುವಾಗ ಬಹುತೇಕ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನೇ ನಾವು ಮಾಡ ಬೇಕಾಗುತ್ತದೆ.ಲಿಫ್ಟ್ ಇರಿಗೇಷನ್‌ಗೆದೇ ಆಗಲೇ ೧೮೦ ಕೋಟಿ ಖರ್ಚು ಮಾಡಿದ್ದೇವೆ. ಈಗ ಎರಡು ಮೂರು ಕಡೆ ಫ್ಲೋ ಆದರೂ ಮಾಡೋಣ, ಲಿಫ್ಟ್ ಆದರೂ ಮಾಡೋಣ. ಯಾವುದೇ ಆದರೂ ಅಲ್ಲಿ ಮೇಟ್ ಕಾಸ್ಟ್ ಒಂದೇ ಆಗುತ್ತದೆ ವೆಂಟಿನೆನ್ಸ್ ಕಾಸ್ಟ್ ಜಾಸ್ತಿಯಾಗುತ್ತದೆ.ಲಿಫ್ಟ್ ಇರಿಗೇಷನ್‌ನಲ್ಲಿ ಪವರ್ ಉಪಯೋಗ ಜಾಸ್ತಿಯಾಗುತ್ತದೆ. ಈಗ ನಾರಾಯಣಪುರ ರೈಟ್ ಬ್ಯಾಂಕ್ ಲಿಫ್ಟ್ ಇರಿಗೇಷನ್ ಇದೆ, ಬಿಜಾಪುರ ಜಿಲ್ಲೆಯಲ್ಲಿ ಮುಳವಾಡ ಸ್ಕೀಮ್ ಇದೆ, ಎಂಟೈರ್ ಕೃಷ್ಣ ಬೇಸಿನ್‌ನಲ್ಲಿ ಫ್ಲೋಗಿಂತ ಲಿಫ್ಟ್ ಇರಿಗೇಷನ್ ಜಾಸ್ತಿ ಉಪಯೋಗ ಮಾಡಿಕೊಳ್ಳಬೇಕಂದರೆ ಪವರ್‌ದು ಇರುವ ಸಮಸ್ಯೆ. ಸಣ್ಣ ಇರಿಗೇಷನಾದರೆ ೧೦-೨೦ ಹಾರ್ಸ್ ಪವರ್‌ನಲ್ಲೇ ಮಾಡಬಹುದು. ಆದರೆ ನಮ್ಮಲ್ಲಿ ಪವರ್ ಸ್ಕೇರ್ಸಿಟಿ ಹೆಚ್ಚಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮಾಲತಿ ಹತ್ತಿರ ರಿಸರ್ವಾಯರ್ ಮಾಡಂತ್ತೇವೆಂದರೆ ಅಲ್ಲಿ ಜನರನ್ನು ಎತ್ತಿ ಕಟ್ಟಿ ಮುಳುಗಡೆಯಾಗುವುದು ನಿಲ್ಲಬೇಕೆಂದು ಜನ ಬಯಸುತ್ತಿದ್ದಾರೆಂದು ಕೋಳಿವಾಡರು ಹೇಳಿದರು. ಈ ಬಗ್ಗೆ ನಾನು ಟೆಕ್ನಿಕಲ್ ಕಮಿಟಿಯವರ ಒಪಿನಿಯನನ್ನು ಆಗಲೇ ಪಡೆದಿದ್ದೇನೆ, ಅಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಪವರ್ ಜಾಸ್ತಿ ಬೇಕಾದರೆ ಫ್ಲೋ ಇರಿಗೇಷನ್ ಏಕೆ ಮಾಡಬಾರದು ಎಂದು ಒಪ್ಪಿನಿಯನ್ ಪಡೆದಿದ್ದೇನೆ. ಆದ್ದರಿಂದ ಸಾಧ್ಯತಾ ಬಾಧಕಗಳನ್ನು ಯೋಚನೆ ಮಾಡಿಕೊಂಡು ಅದರ ಬಗ್ಗೆ ಮುಂದಿನ ಹೆಜ್ಜೆ ಇಡಬೇಕು. ಮುಳುಗಡೆ ಬಗ್ಗೆಯೂ ಜನ ಸಿನಿಕರಾಗುವುದು ತರವಲ್ಲ, ಏಕೆಂದರೆ ನದಿ ಹುಟ್ಟುವುದು ಕೋಲಾರ ದಲ್ಲಲ್ಲ ಯಾವ ಪ್ರದೇಶ ವ್ಯಾಪ್ತಿಯಲ್ಲಿ ಬರುವುದೋ ಅದು ಮುಳುಗಡೆಯಾಗಬೇಕಾಗುತ್ತದೆ. ಇದು ಅನಿವಾರ್ಯ. ಮುಳುಗಡೆಗೊಳಪಡುವ ಜನರಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಕೊಡಬೇಕಾದುದು ಸರ್ಕಾರದ ಜವಾಬ್ದಾರಿ, ಹಾಗೇ ಬಿಡುವುದಕ್ಕೆ ಸಾಧ್ಯವಿಲ್ಲ. ನಾನು ಒಪ್ಪಿಕೊಳ್ಳುತ್ತೇನೆ. ಇತ್ತೀಚೆಗೆ ಸರ್ಕಾರವೂ ಇದರ ಬಗ್ಗೆ ಔದಾರ್ಯದಿಂದ ನಡೆದುಕೊಂಡಿದೆ ಎಂದು ಹೇಳುತ್ತೇನೆ. ಮಾನ್ಯ ಅಧ್ಯಕ್ಷರ ಮನಸ್ಸಿನಲ್ಲೂ ಇದನ್ನು ಹೇಗಾದರೂ ಮಾಡಿ ಮಾಡಿಸ ಬೇಕೆಂದು ಇದೆ, ತಾವು ಕೂಡ ಸ್ಪೀಕರ್ ಆಗಿದ್ದರೂ ಮೊದಲು ಸದಸ್ಯ ಎಂದು ಧಾರವಾಡ ಜಿಲ್ಲೆಯಲ್ಲಿ ಡಿಸ್ಟ್ರಿಕ್ ಡೆವಲಪ್‌ಮೆಂಟ್ ಕೌನ್ಸಿಲ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದೀರಿ, ರೈತರ ಸಮಸ್ಯೆ ಬಗೆಹರಿಸಂ

ವುದಕ್ಕೆ ಹತ್ತಾರು ಸಲ ಇದನ್ನು ಮಾಡಲೇಬೇಕು ಎಂದು ಹೇಳಿಯೂ ಇದ್ದೀರಿ. ಆಲ್ಲದೆ ಫೈನಾನ್ಸ್ ಡಿಪಾರ್ಟ್‌ಮೆಂಟಿನಿಂದ ಯಾವ್ಯಾವುದಕ್ಕೆ ಎಷ್ಟೆಷ್ಟು ಹಣ ಖರ್ಚಾಗಿದೆ ಎಂದು ಈ ಮನೆಯ ಸದಸ್ಯರಿಗೆಲ್ಲ ತಮ್ಮ ಕಚೇರಿಯಿಂದ ಬುಲೆಟಿನ್‌ಗಳನ್ನು ಕಳಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ತಾವು ವಿಶೇಷ ಆಸ್ಥೆ ವಹಿಸಿದ ನಂತರ ಮೊದಲ ಬಾರಿಗೆ ಇಲ್ಲಿ ಇದೆಲ್ಲ ನಡೆಯುತ್ತಿರುವುದನ್ನು ನಾನು ನೋಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅದೇ ನಮಗೆ ಕಷ್ಟವಾಗಿರುವುದು.

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಉಪಯೋಗ ಮಾಡಿಕೊಂಡರೆ ನಮ್ಮನ್ನು ನೀವು ಇಕ್ಕಟ್ಟಿಗೆ ಸಿಕ್ಕಿಸಬಹುದು.

ಶ್ರೀ ಎಸ್. ಬಂಗಾರಪ್ಪ.—ಅವರು ಏನೇನು ನಡೆಯುತ್ತಿದೆ ಎಂದೆಲ್ಲ ಬೇಕಾದಷ್ಟು ವಿವರ ಗಳನ್ನು ನಮಗೆ ಕೊಡುತ್ತಾರೆ. ನಾವು ಅವನ್ನೆಲ್ಲ ಓದಿ ಸ್ಟಡಿ ಮಾಡಿಕೊಂಡು ಬಂದು ಇಲ್ಲಿ ಪ್ರಶ್ನೆ ಕೇಳಬೇಕೆಂದರೆ ಟೈಮೇ ಕೊಡುವುದಿಲ್ಲ, ನಾವೂ ಕೆಲವು ಸಲ ಅಧ್ಯಕ್ಷರ ಮೇಲೆ ಗರಂ ಆಗ್ಬೇಕಾಗುತ್ತದೆ. ನಮ್ಮನ್ನೆಲ್ಲ ರೆಡಿ ಮಾಡಿ ಅದನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕೆ ಅವಕಾಶ ಕೊಡದಿದ್ದರೆ ಏನು ಉಪಯೋಗ ?

ಶ್ರೀ ಹೆಚ್.ಡಿ. ದೇವೇಗೌಡ.—ನನ್ನ ಪ್ರಕಾರ ಬಂಗಾರಪ್ಪನವರಿಗೆ ಸಿಕ್ಕಿರುವಷ್ಟು ಸಮಯ ಇನ್ಯಾರಿಗೂ ಇಲ್ಲಿ ಸಿಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇಲ್ಲ ಇಲ್ಲ.

ಶ್ರೀ ಹೆಚ್.ಡಿ. ದೇವೇಗೌಡ.—ಶ್ರೀ ಕೆ.ಹೆಚ್. ಶ್ರೀನಿವಾಸ್ ಅವರು ಹೇಳಿದಂತಹ ಅಭಿಪ್ರಾಯ ವನ್ನು ಒಪ್ಪಿಕೊಳ್ಳುತ್ತೇನೆ. ಅವರು ಇಮ್ಮಡಿಯೇಟಾಗಿ ತುಂಗಾ ಕ್ರಸ್ಟ್ ಗೇಟನ್ನು ಯೂಸ್ ಮಾಡಿ, ಅದರಿಂದಾದರೂ ನೀರನ್ನು ಉಳಿಸಬಹುದೆಂದರು. ಅದನ್ನು ನಾನು ನಮ್ಮ ಆಫೀಸರ್ಸ್ ಬಳಿ ವಿಚಾರ ಮಾಡಿದೆ ಆದರೆ ಏನಾಗಿದೆ ಎಂದರೆ ಡ್ರೈವಿಂಗ್ ಹೆಡ್ ಸಿಗುವುದೂ ಕಷ್ಟ ಎನ್ನುತ್ತಿದ್ದಾರೆ. ನೀರನ್ನು ಮೇಲೆ ಸ್ಟೋರ್ ಮಾಡಿಕೊಳ್ಳುವ ವಿಷಯದಲ್ಲಿ ಅಲ್ಲಿ ನೀರು ಇಟ್ಟುಕೊಂಡು ಬಿಡುಗಡೆ ಮಾಡಿದರೆ ಹೋಗಿಬಿಡುತ್ತದೆ, ಆಗ ಅದನ್ನು ತಡೆಯಲು ಡ್ರೈವಿಂಗ್ ಹೆಡ್ ಸಿಗುವುದಕ್ಕೆ ಕಷ್ಟವಾಗುತ್ತದೆ. ಬರೀ ಕ್ರಸ್ಟ್ ಗೇಟ್ ಹಾಕುವುದರಿಂದ ಮಳೆಗಾಲದಲ್ಲಿ ಫ್ಲಡ್ಸ್ ಬಂದಾಗ ನೀರೆಲ್ಲ ಹೋಗಿಬಿಡುತ್ತದೆಂಬುದು ಹಿಂದು ವಾದ ಆಮೇಲೆ ಕೊಟ್ರುಪ್ಪನವರು ಹೇಳಿದರು, ಕಾವೇರಿ ವಿಚಿನ್‌ದು ಚಿಡ್ಡಿ ಪ್ರಶ್ನೆ ಅಂತ. ಚಿಡ್ಡಿ ಪ್ರಶ್ನೇನೂ ಇಲ್ಲ. ಕಚ್ಚೆ ಪಂಚೆ ಪ್ರಶ್ನೇನೂ ಇಲ್ಲ. ಇಲ್ಲಿರುವುದೇನೆಂದರೆ ಕಾವೇರಿಗೂ ಕೃಷ್ಣಾಗೂ ವ್ಯತ್ಯಾಸ ಇದೆ. ಕಾವೇರಿದು ಪಂಚಿಕೆಯಾಗಿಲ, ನಾಳೆ ಏನು, ನಾಡಿದ್ದು ಏನು ಎಂದು ಕುತ್ತಿಗೆ ಮೇಲೆ ಕತ್ತಿ ಇದೆ, ಒಪ್ಪುತ್ತೇನೆ. ಆದರೆ ಕೃಷ್ಣದ್ದು ೧೦–೧೨ ವರ್ಷ ಟೈಮಿದೆ, ಅಷ್ಟೆ. ನಾನು ಎರಡೂ ಆಗಬೇಕೆನುತ್ತೇನೆ. ನನ್ನ ನಿಲುವಿನಲ್ಲಿ ಬದಲಾವಣೆ ಇಲ್ಲ. ಬೇಕಾದರೆ ಇಲ್ಲಿ ನಾನು ಒಂದು ಠರಾವನ್ನು ಕಮಿಟ್ ಮಾಡುತ್ತೇನೆ. ಈ ಮನೆಯ ಸದಸ್ಯನಾಗಿ ಕಮಿಟ್ ಮಾಡುತ್ತೇನೆ. ಬೆಟರ್‌ಮೆಂಟ್ ಲೆವಿ ಚಾರ್ಜನ್ನು ರದ್ದು ಮಾಡಬೇಕೆಂದು ನನ್ನ ಬಳಿ ಫೈಲ್ ಬಂದದ್ದು ಅದನ್ನು ಹಿಡಿದಿಟ್ಟಿದ್ದೇನೆ. ನಾನು ಯಾವ ಆರ್ಡರನ್ನೂ ಪಾಸ್ ಮಾಡಿಲ್ಲ. ನೀರಾವರಿ ತೆರಿಗೆ, ಬಾಂಡು, ಅದೂ ಇದೂ ಅಂತ ಹೇಳಿದರು. ಆದರೆ ಪ್ರಧಾನಮಂತ್ರಿಗಳಿಗೆ ೪ ಕಾಗದ ಬರೆದಿದ್ದೇನೆ, ನೀರಾವರಿ ಮಂತ್ರಿಗಳ ಕಾನ್‌ಫರೆನ್ಸಿನಲ್ಲಿ ಹೇಳಿದ್ದೇನೆ ನಮ್ಮ ರೈತರಿಂದ ನಾವು ಬಾಂಡ್ ಮೇಲೆ ಹಣ ತೆಗೆದುಕೊಳ್ಳುತ್ತೇವೆ, ಪರ್ಮಿಷನ್ ಕೊಡಿ ಅಂತ, ಏನು ಮಾಡೋದಂ ರಿಸರ್ವ ಬ್ಯಾಂಕಿನಿಂದ ಇನ್ನೂ ಪರ್ಮಿಷನ್ ಸಿಕ್ಕಿಲ್ಲ. ನಾನು ಏನು ಮಾಡಲಿ ? ಒಟ್ಟಿನಲ್ಲಿ ಇಷ್ಟು ಹೇಳುತ್ತೇನೆ. ನಾವೆಲ್ಲರೂ ಒಂದು ನಿರ್ಣಯಕ್ಕೆ ಬರ ಬೇಕಾಗುತ್ತದೆ. ಏನಾದರೂ ಮಾಡಿ ದುಡ್ಡನ್ನು ಹೊಂಚಿಕೊಳ್ಳಬೇಕಂ. ಉತ್ತರ ಕನ್ನಡದ ಸದಸ್ಯರು ಆಗ್ರಹಪೂರ್ವಕವಾಗಿ ಮಾತನಾಡಿ ನಿಮ್ಮ ಕಾಲದಲ್ಲಿ ಇದು ಆಗಬೇಕೆಂದಂ ಹೇಳಿದರು. ೧೨ ತಿಂಗಳಲ್ಲಿ ತುಂಗಾ ಕಟ್ಟೆ ರಿಪೇರಿ ಮಾಡಿಸಲು ಆಗುತ್ತದೆಯೇ ? ಬಜೆಟ್‌ನಲ್ಲಿ ಹಾಕಿದಿರಿ ಎಂದು ಹೇಳಿದರು. ಹೌದು ಬಜೆಟ್‌ನಲ್ಲಿ ಹಾಕುವುದಾರೂ ಎಷ್ಟು ಹಾಕಲು ಸಾಧ್ಯ ? ಇದು ವಾಸ್ತವಾಂಶ. ಅದಕ್ಕೋಸ್ಕರ ನನ್ನ ಖಚಿತ ನಿಲುವು, ಅದರಲ್ಲಿ ಎಷ್ಟರಮಟ್ಟಿಗೆ ಸಫಲನಾಗುತ್ತೇನೋ ಗೊತ್ತಿಲ್ಲ ಏನೇ ಆಗಲಿ ರಾಜ್ಯದ ಸಂಪೂರ್ಣ ನೀರನ್ನು ಬಳಸಿಕೊಳ್ಳಬೇಕೆಂಬ ಇಚ್ಛೆ ನನಗಿದೆ.

೧೧-೩೦ ಎ. ಎಂ.

ಸುದೈವದಿಂದ ತಾವು ಅಧ್ಯಕ್ಷರಾಗಿದ್ದೀರಿ. ಧಾರವಾಡ ಜಿಲ್ಲೆಯ ಮಂಖ್ಯಿಮಂತ್ರಿಗಳೂ ಇದ್ದಾರೆ. ಅವರು ರೈತರ ಪಂಕ್ಷಕ್ಕೇ ಇದ್ದಾರೆ. ಏನಾದರೂ ಮಾಡಿ ಹೆಚ್ಚು ಸಹಾಯ ಮಾಡಬೇಕೂ ರೈತರಿಗೆ ಎಂಬ ಆಸೆ, ಆಸಕ್ತಿ ಅವರಿಗೆ ಇದೆ. ನೀವು ಇಬ್ಬರೂ ಸೇರಿ ಶಕ್ತಿ ತುಂಬಿ ನಾವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿ, ಅದನ್ನು ತೆಗೆದುಕೊಳ್ಳುವುದಕ್ಕೆ ನನ್ನದು ಯಾವುದೇ ತಕರಾರು ಇಲ್ಲ. ನನ್ನದು ಎಳ್ಳಷ್ಟೂ ತಕರಾರು ಇಲ್ಲ. ತಾವು ಇಲ್ಲಿ ಕುಳಿತಿದ್ದೀರಿ, ಅವರು ಅಲ್ಲಿ ಕುಳಿತಿದ್ದಾರೆ, ನೀವು ಎಷ್ಟು ದೂರ ಓಡಿ ಅಂದರೆ ನಾನು ಅಷ್ಟು ದೂರ ಓಡುತ್ತೇನೆ. ೨೪ ಗಂಟೆಗಳಲ್ಲಿ ೧೨ ಗಂಟೆ ೧೮ ಗಂಟೆ ಕೆಲಸವನ್ನು ಇಂಜಿನಿಯರ್ ಮಾಡಬೇಕೆಂದು ಹೇಳಿ, ನಾವು ಮಾಡುತ್ತೇವೆ. ಎಷ್ಟು ಗಂಟೆ ಕೆಲಸ ಮಾಡಬೇಕೆಂದು ಹೇಳಿ, ಮಾಡುತ್ತೇವೆ ನನ್ನ ಮನಸ್ಸಿನಲ್ಲಿರತಕ್ಕ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ, ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಇಚ್ಛೆ ಇಲ್ಲ. ಯೋಜನೆಗಳ ಬಗ್ಗೆ ಕನ್‌ಫ್ಯೂಷನ್ ಮಾಡಿ ಅದನ್ನು ತಮ್ಮ ಮುಂದಿಡಬೇಕು ಎಂದು ಅಲ್ಲ. Technical background· I am prepared to take concrte steps. ನಾನು ಇದರ ಬಗ್ಗೆ ಹಿಂಜರಿಯುವುದಿಲ್ಲ. ಒಂದೇ ಒಂದು ಮನಸ್ಸಿನಲ್ಲಿ ಆಳುಕು ಎಂದರೆ ಅದು ನಾವು ಮಾತು ಕೊಟ್ಟು ಸದನದಲ್ಲಿ ಅದು ಪೊಳ್ಳು ಆಗಬಾರದು, ಯಾವುದೇ ನಿರ್ಣಯವನ್ನು ನಾನು ತೆಗೆದುಕೊಂಡರೂ ಸಹ ಸ್ವಲ್ಪ ಘಟ್ಟಿಯಾಗಿ ನಿರ್ಣಯವನ್ನು ತೆಗೆದುಕೊಳ್ಳುವ ಸ್ವಭಾವ ನನ್ನದು. ಅಷ್ಟೆ ಅಲ್ಲ, ನಮ್ಮ ಪಕ್ಷ ಅಲ್ಲ ಸದಸದಲ್ಲಿನ ಬೇರೆ ಸದಸ್ಯರ ಜೊತೆ ಚರ್ಚೆ ಮಾಡೋಣ. ಅಷ್ಟೇ ಅಲ್ಲ, ಸಂಪನ್ಮೂಲಗಳ ಬಗ್ಗೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇನ್ನು ಒಂದು ಆಥವಾ ಎರಡು ತಿಂಗಳು ಕಾಲಾವಕಾಶ ನಿರ್ಣಯಗಳನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ ತೆಲುಗು ಗಂಗಾ ಯೋಜನೆ ಬಗ್ಗೆ ಚರ್ಚೆ ಬಗ್ಗೆ ಆ ಯೋಜನೆ ಬಗ್ಗೆ ಕೂಡ ನನ್ನ ಅಭಿಪ್ರಾಯವನ್ನು ಹೇಳುವವನಿದ್ದೇನೆ. ಸರ್ಕಾರ ಆ ಯೋಜನೆ ಬಗ್ಗೆ ಅಂತಿಮ ಸ್ವರೂಪವನ್ನು ಕೊಡಲಿಕ್ಕೆ ಪ್ರಯತ್ನ ಮಾಡಿದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಒಂದೇ ಒಂದು ಕ್ಲಾರಿಫಿಕೇಶನ್

ಶ್ರೀ ಕೆ. ಹೆಚ್. ಶ್ರೀನಿವಾಸ್,—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರ ಅವರ ಹೇಳಿಕೆಗಿಂತ ಹೆಚ್ಚು ತೃಪ್ತಿಯನ್ನು ತಂದಿದೆ. ನಾನು ಅವರಿಗೆ ಕೇಳಿಕೊಳ್ಳುವುದು ಇಷ್ಟೇ. ದಯವಿಟ್ಟು ಈಗಲಾದರೂ ನಿಮ್ಮ ಇಂಜಿನಿಯರ್‌ಗಳಿಗೆ ಸೂಚಿಸಿ, ಕ್ರಿಸ್ಟ್ ಗೇಟ್ ನಿರ್ಣಯವನ್ನು ಮಾಡಲಿ ಫೈನಲ್ ಇರಿಗೇಷನ್ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಲಿಫ್ಟ್ ಇರಿಗೇಷನ್ ಅನ್ನು ಮಾಡಬೇಕು. ಈ ವರ್ಷ ಮಳೆ ಚೆನ್ನಾಗಿ ಆಗಿದೆ. ಹೋದ ವರ್ಷದ ಪರಿಸ್ಥಿತಿಯಲ್ಲಿ ಹೋಲಿಕೆ ಮಾಡಿದರೆ ಈ ವರ್ಷ ವಿದ್ಯುಚ್ಛಕ್ತಿ ಅಭಾವ ಇಲ್ಲ. ವಿದ್ಯುಚ್ಛಕ್ತಿ ಅಭಾವ ನಿರಂತರವಾಗಿ ಅಂದರೆ ಇನ್ನೂ ಹಲವಾರು ವರ್ಷ ಕಾಡೇ ಕಾಡುತ್ತದೆ ಎನ್ನುವ ಬಗ್ಗೆ ಯಾವುದೇ ಸಂದೇಹ ಇಲ್ಲ. ಆದರೂ ಬಹಳ ದೊಡ್ಡ ಪ್ರಮಾಣದಲ್ಲಿ ಇದರಲ್ಲಿ ಲಿಫ್ಟ್ ಇರಿಗೇಷನ್ ಮಾಡುವುದಕ್ಕೆ ಸಾಧ್ಯವಾದರೆ ಆದಷ್ಟೂ ಅದಕ್ಕೆ ಬೇಕಾಗತಕ್ಕಂತಹ ಪವರ್ ಅನ್ನು ಕೂಡ ಇಯರ್ ಮಾರ್ಕ್ ಮಾಡುವುದಕ್ಕೆ ಸಾಧ್ಯವಾಗಬಹುದು ಹೈ ಲೆವೆಲ್ ಲಿಫ್ಟ್ ಇರಿಗೇಷನ್ ಅನ್ನು ಈಗಿರುವಂತೆ ಆಥವಾ ಅದಕ್ಕೆ ಒಂದು ಕಾರ್ಯವನ್ನು ಮಾಡಿದ ಪಕ್ಷದಲ್ಲಿ ಎಲ್ಲಾ ಇದರಲ್ಲಿ ಬರತಕ್ಕ ಹಿಡುವಳಿದಾರರ ಮೂಲಕ ಅವರ ಜಮೀನುಗಳನ್ನು ಬ್ಯಾಂಕ್‌ಗಳಿಗೆ ಲೀಡ್ ಮಾಡಿ ಅವರಿಂದ ಹಣವನ್ನು ಒಟ್ಟು ಮಾಡಿ ಸಾಕಷ್ಟು ಸಂಪನ್ಮೂಲವನ್ನು ಸರ್ಕಾರೇತರ ಮೂಲಗಳಿಂದ ಮಾಡಿಕೊಡುವುದಕ್ಕೆ ಸಾಧ್ಯ ಇದೆ. ಬಹುಶಃ ನಾವು ಎಲ್ಲಾ ಶಾಸಕರು ಈ ಪ್ರಯತ್ನವನ್ನು ಮಾಡಿ ಸರ್ಕಾರದ ಜೊತೆ ಸಂಪೂರ್ಣವಾಗಿ ಸಹಕರಿಸಿ ಸರ್ಕಾರದ ಭಾರವನ್ನು ಆದಷ್ಟು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ, ಅದಕ್ಕೆ ತಾವು ಬಹಳ ಶೀಘ್ರವಾಗಿ ಅಧಿಕಾರಿಗಳನ್ನು ಮತ್ತು ನಮ್ಮನ್ನೂ ಕರೆದು ಒಂದು ಅಂತಿಮವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ, ಇದರಲ್ಲಿ ಅಧ್ಯಕ್ಷರೂ ಇರಲಿ, ನಾವುಗಳೂ ಸಹ ಇರುತ್ತೇವೆ.

ಶ್ರೀ ಬಿ ಜಿ. ಕೊಟ್ರಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ತುಂಗಾ ನದಿಯಿಂದ ೮ ಆಥವಾ ೧೦ ಟಿ. ಎಂ, ಸಿ. ನೀರನ್ನು ಅಪ್ಪರ್ ಭದ್ರಾಗೆ ಲಿಫ್ಟ್ ಮಾಡುವ

ಯೋಜನೆಯಿಂದ ಎಂಬುದನ್ನು ನಮ್ಮ ಗಮನಕ್ಕೆ ಬಂದಿದೆ, ನಮ್ಮ ಕಡೆ ಈ ತರದ ವಾತಾವರಣ ತೀವ್ರವಾಗಿ ಹಬ್ಬಿದೆ. ಈ ರೀತಿ ಮಾಡಿದರೆ ಈ ಭಾಗದ ಜನರಿಗೆ ತೊಂದರೆ ಬರಬಹುದೆಂಬ ಕಳಕಳಿ ಕೂಡ ಬಂದಿದೆ. ನಾನು ತಮ್ಮ ಮೂಲಕ ಲೋಕೋಪಯೋಗಿ ಇಲಾಖಾ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ತಾವು ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಬಿಡಬೇಕಂ, ಅದು ಈ ಭಾಗದಲ್ಲಿ ಕೂಡ ಪುಟ್ಟಲಿಕ್ಕೆ ಏನಾದರೂ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಕೋಳೀವಾಡ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀನಿವಾಸ್‌ರಪರರು ಹೇಳಿದ ಹಾಗೆ ಮಾಲತಿ ರಿಸರ್ವಾಯರ್ ನೀರನ್ನು ಕಡಿಮೆ ಮಾಡಿ ಕ್ರೆಸ್ಟ್ ಗೇಟ್‌ಗೆ ಹೋಗತಕ್ಕ ಪರಿಸ್ಥಿತಿ ಇದೆ. ಫ್ಲೋ ಇರಿಗೇಷನ್ ಆಗದಿದ್ದರೆ ಲಿಫ್ಟ್ ಇರಿಗೇಷನ್ ಮಾಡತಕ್ಕ ಯೋಜನೆಗಳನ್ನು ಅಧಿಕಾರಿಗಳ ಕೂಡ ಚರ್ಚೆ ಮಾಡಿ ನಮ್ಮೆಲ್ಲ ಶಾಸಕರನ್ನೂ ಕರೆದು ಒಂದು ತಿಂಗಳೊಳಗೆ ಏನಾದರೂ ನಿರ್ಣಯವನ್ನು ತೆಗೆದುಕೊಳ್ಳತಕ್ಕ ಆಶ್ವಾಸನೆಯನ್ನು ಸರ್ಕಾರ ಕೊಡಬೇಕು. ಇದರ ಜೊತೆ ಸರ್ಕಾರಕ್ಕೆ ಆಗತಕ್ಕ ಆರ್ಥಿಕ ಭಾರವನ್ನು ನೀರಾವರಿಗೆ/ಉಪಯೋಗಿಸತಕ್ಕರೈತರುಹೊರಲಿಕ್ಕೆ ಸಿದ್ಧರಿದ್ದಾರೆಂದು ಹೇಳಲಿಕ್ಕೆ ಇಚ್ಛಿಷಡುತ್ತೇನೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಇನ್ನು ಒಂದು ತಿಂಗಳೊಳಗಾಗಿ ಸರ್ಕಾರದ ನಿರ್ದಿಷ್ಟವಾದ ನಿಲುಮೆಯನ್ನು ನಮಗೆ ತಿಳಿಸಬೇಕಂ, ಜನತೆಗೆ ತಿಳಿಸಬೇಕು ಎಂದು ತಮ್ಮ ಮೂಲಕ ಅವರನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನ ಮನಸ್ಸು ಹಗುರವಾಗಿದೆ. ನಾನು ಹಗುರವಾದ ಮನಸ್ಸಿನಿಂದ ಮಾತನಾಡುತ್ತೇನೆ. ಮಾನ್ಯ ಶ್ರೀನಿವಾಸ್‌ರಪರರು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅವರು ತುಂಬಾ ಒಳ್ಳೆಯ ಭಾವನೆಗಳನ್ನು ಅಳವಡಿಸಿಕೊಂಡಿದ್ದಾರೆ: ಸಂತೋಷ. ನೀರಾವರಿ ಕೆಲಸ ಆಗಬೇಕು. ಬೇರೆ ಕೆಲಸ ನಿಲ್ಲಿಸಬೇಕು ಎಂದು ಅಲ್ಲ ಬೇರೆ ಕೆಲಸವನ್ನು ನಿಲ್ಲಿಸಬೇಕು ಅಥವಾ ನಿಲ್ಲಿಸಬಾರದು. ಅದು ಸರಿಯಾದ ವಾದ ಅಥವಾ ಸರಿಯಾದ ವಾದ ಅಲ್ಲವೆಂದು ನಾನು ಹೇಳುವುದಿಲ್ಲ. ಕೆಲವು ಕೆಲಸಗಳನ್ನು ಅನಿವಾರ್ಯವಾಗಿ ಮಾಡಲೇ ಬೇಕಾಗಿರುತ್ತೆದೆ ಆಸ್ಪತ್ರೆಗಳು ಅಥವಾ ಪರಿಶಿಷ್ಟ ಹಾಗೂ ಹಿಂದುಳಿದ ವರ್ಗದವರಿಗೆ ಹಾಸ್ಟಲ್‌ಗಳು, ಕಲ್ಯಾಣಮಂದಿರಗಳು, ವಿದ್ಯಾರ್ಥಿನಿಲಯಗಳು ಇತ್ಯಾದಿ ಮಾಡಬೇಕು Wherever it is possible we must also take hard decisions ಎನ್ನುವ ಮಾತನ್ನು ಹೇಳುತ್ತೇನೆ. ಈ ಸ್ಥಾನದಲ್ಲಿ ನಿಂತುಕೊಂಡು ಹೇಳುತ್ತೇನೆ ಇನ್ನು ೧೦-೧೨ ವರ್ಷ ಈ ರಾಜ್ಯದಲ್ಲಿ ನಾನು ಬಹಳ ಕಳಕಳಿಯಿಂದ ಜೀವಂತ್ತೇನೆ. ೧೮೦೨೨ ವರ್ಷಗಳಾದರೂ, ಅಧಿಕಾರದಲ್ಲಿ ಯಾವ ಪಕ್ಷವೇ ಅಧಿಕಾರದಲ್ಲಿ ಇರಲಿ ವಿರೋಧಪಕ್ಷದವರು ಬಹಳ ಕಾಠಿಣ್ಯವಾದ ನಿರ್ಣಯವನ್ನು ತೆಗೆದುಕೊಳ್ಳಬೇಕು. ಚುನಾವಣೆಯಲ್ಲಿ ಜನರು ನಮ್ಮನ್ನು ಸೋಲಿಸುತ್ತಾರೆ ಅಥವಾ ಗೆಲ್ಲಿಸುತ್ತಾರೆ ಎಂಬುದೂ ಮುಖ್ಯ ಪ್ರಶ್ನೆ ಅಲ್ಲ. ಇನ್ನು ೧೦ ವರ್ಷ ಆದ ಮೇಲೆ ಏನು ಬೇಕಾದರೂ ಮಾಡಿ. ಅಕ್ಕಿ ಹಂಚಿ ಬೇಳೆಯನ್ನು ಹಂಚಿ, ಚಪ್ಪಲಿ ಕೂಡ ಪುಕ್ಕಟೆಯಾಗಿ ಕೊಡಿ. ಓಟು ಕೊಡುತ್ತಾರೆ ಎಂದು ತಮಿಳುನಾಡಿನಲ್ಲಿ ಕೊಡುವ ಹಾಗೆ ಚಪ್ಪಲಿ ಕೊಡಿ. ಯಾರು ಬೇಡ ಅಂದರು. ಆದರೆ ನನ್ನ ಮುಂದೆ ಇರುವುದು ಪ್ರಶ್ನೆ ಹಾರ್ಡ್ ಡಿಸಿಷನ್ ತೆಗೆದುಕೊಳ್ಳಬೇಕು ಎಂದು. ಬೊಮ್ಮಾಯಿಯವರು ಮುಖ್ಯಮಂತ್ರಿಗಳಾಗಿದ್ದಾರೆ, ತಾವು ಅಧ್ಯಕ್ಷರಾಗಿದ್ದೀರಿ. ಆ ಸ್ಥಾನದಲ್ಲಿ ಕುಳಿತಿರುವುದು ತಮಗೂ ಕಷ್ಟ, ನಮಗೂ ನಿಮ್ಮ ಕಷ್ಟ ಗೊತ್ತಾಗುತ್ತದೆ. ನಾವು ಹಾರ್ಡ್ ಡಿಸಿಷನ್ ತೆಗೆದುಕೊಳ್ಳಬೇಕು: ಈ ಸದನಕ್ಕೆ ಮನಸ್ಸು ಇದ್ದರೆ ನಾವು ಕಲೆಕ್ಟೀವ್ ಡಿಸಿಷನ್ ತೆಗೆದುಕೊಳ್ಳೋಣಬೇಕು. ಎಲ್ಲಿ ಬೆನಿಫಿಟ್ಸ್ ಆಗುತ್ತದೆ ಅಂಥ ಕಡೆ ರೈತರು ಸರ್ಕಾರಕ್ಕೆ ಕೊಡಬೇಕಾದ ಹಣ ಏನೇ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬಂದರೂ ಕೂಡ ವಸೂಲು ಮಾಡಬೇಕು. ನಮಗೆ ಅಂಜಿಕೆ ಏನು ಆಗುತ್ತದೆ ಏನು ಆಗುತ್ತದೆ ಎಂದು ಭಯ. ನ್ಯಾಯವಾಗಿ ಇದ್ದದ್ದನ್ನು ಕೊಡಬೇಕು. ನೀರಾವರಿ ತೆರಿಗೆ ಬಾಕಿ ಇವ್ವೊತ್ತಿನ ದಿವಸ ೩೮ ಕೋಟಿ ರೂಪಾಯಿಗಳು, ದಂಡ ಅಲ್ಲ ಬಾಕಿ ಇದೆ. ಕ್ರಾಪಿಂಗ್ ಪ್ಯಾಟರ್ನ್ ಛೇಂಜ್ ಮಾಡುವುದಲ್ಲ. ಎಲ್ಲಿ ನೀರಾವರಿ ಸೌಲಭ್ಯ ಇದೆ, ಪಂಪ್ ಸೆಟ್ ಇದೆ. ಸರ್ಕಾರದ ನಿಯಮಂಗಳನ್ನು ಉಲ್ಲಂಘನೆ ಮಾಡಿ ದಂಡ ಹಾಕಿದ್ದರೆ ಅದನ್ನು ವಸೂಲು ಮಾಡುವುದು ಬೇಡ. ಆದರೆ ನೀರಾವರಿಗೆ ಕೊಟ್ಟಿರುವ ಬಾಕಿ ೩೮ ಕೋಟಿ ರೂಪಾಯಿಗಳು, ಅದನ್ನು ಟಚ್ ಮಾಡುವುದಕ್ಕೆ ಹೆದರಿಕೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇದರ ಬಗ್ಗೆ ಪ್ರಶ್ನೆಯನ್ನು ಎತ್ತಿದ್ದಾರೆ, ಬಹಳ ಸಂತೋಷ. ನಾನು ಹಿಂದೆ ಮಾತನಾಡುವಾಗ ಹೇಳಿದ್ದೆ, ಹಲವಾರು ವರ್ಷಗಳಿಂದು ತಾತ್ಕಾಲಿಕವಾಗಿ

ಯಾರನ್ನಾದರೂ ತೃಪ್ತಿ ಪಡಿಸುವುದಕ್ಕೋಸ್ಕರ ರಾಜಕೀಯವಾಗಿ ಬೆನಿಫಿಟ್ ನೋಡಿಕೊಂಡು ತೀರ್ಮಾನಗಳನ್ನು ತೆಗೆದುಕೊಂಡಿರುವುದರಿಂದ so much distortion hos come into this field. ಆದ್ದರಿಂದ ಈಗಲಾದರೂ ಅದಕ್ಕೆ ಒಂದು ರೌಂಡ್ ಟೇಬಲ್ ಕಾನ್‌ಫೆರೆನ್ಸ್ ಮಾಡುವುದು ಒಳ್ಳೆಯದು, ಎಲ್ಲಾ ಪಕ್ಷಗಳ ಶಾಸಕರನ್ನು ಕರೆಯಿರಿ, ರೈತ ಸಂಘಟನೆಗಳವರನ್ನು, ಅದು ಎರಡು ಸಂಘಟನೆ ಆದರೂ ಪರವಾಗಿಲ್ಲ, ಎಲ್ಲರನ್ನು ಕರೆದು ಒಟ್ಟಿಗೆ ನಿಷ್ಕರ್ಷೆ ಮಾಡಬೇಕು. ಇದರಲ್ಲಿ ರಾಜಕಾರಣ ಮಾಡತಕ್ಕದ್ದು ಏನಿಲ್ಲ. ರಾಜ್ಯದ ಹಿತದೃಷ್ಟಿಯಿಂದ ಮಾಡಬೇಕು. ಈಗ ರೈತರು ಸುಖ ಪಟ್ಟರೆ ಸಾಲದು. ಮುಂದೆ ಉಳಿದವರು ನೀರಿಗೋಸ್ಕರ ಲಾಟರಿ ಹೊಡೆಯಬಾರದು. ಈ ದೃಷ್ಟಿಯನ್ನು ಇಟ್ಟುಕೊಂಡು ಒಂದು ಸಮಗ್ರವಾದ ತೀರ್ಮಾನವನ್ನು ಮಾಡಬೇಕು. which should be binding on all the parties. ಹಿಂದೆ ಏನು ಆಗಿದೆ past is past. De-nove you have to look into the matter. I hope Hon'ble Minister will initiate action in this regard.

ಶ್ರೀ ಡಿ. ಜೆ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಈ ಕಾನ್‌ಫರೆನ್ಸ್‌ನಲ್ಲಿ ಹೊಸಕಾಸಿನ ಇಲಾಖೆಯವರನ್ನು ಮಾತ್ರ ಕರೆಯಬಾರದು ಬೇಡ. ಅವರನ್ನು ಕರೆದರೆ ಅವರು ಗಿಡದಲ್ಲಿ ದುಡ್ಡು ಬಿಡುತ್ತದೆಯೇ, ಮರದಲ್ಲಿ ದುಡ್ಡು ಬಿಡುತ್ತದೆಯೇ ಎಂದು ಕೇಳುತ್ತಾರೆ. ಶ್ರೀನಿವಾಸರವರು ಹೇಳಿದ ಹಾಗೆ ಶಾಸಕರನ್ನು ಕರೆಯಿರಿ.

† ಶ್ರೀ ವೈ. ಕೆ. ರಾಮಯ್ಯ —ಮಾನ್ಯ ಅಧ್ಯಕ್ಷರೇ, ನಮ್ಮ ನೀರಾವರಿ ಯೋಜನೆಗಳ ಕೆಲಸಗಳಿಗೆ ಆರ್ಥಿಕ ಶಕ್ತಿಯನ್ನು ಕ್ರೂಢೀಕರಿಸುವುದಕ್ಕಾಗಿ ಈ ಸದನಕ್ಕೆ ಸಲಹೆಗಳನ್ನು ಕೊಡಿ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಈ ರಾಷ್ಟ್ರದಲ್ಲಿ ದುರದೃಷ್ಟ ವಂತರು ಎಂದರೆ ರೈತರು ಎಂದು ಕಾಣುತ್ತದೆ. ಏಕೆಂದರೆ ಎಲ್ಲ ಪ್ರಯೋಗಗಳೂ ಅವರ ಮೇಲೆಯೇ ಆಗಬೇಕು. ಏಕೆಂದರೆ, ನನ್ನ ಸ್ನೇಹಿತರು ಯಾರೋ ಒಬ್ಬರು ನೀರಾವರಿ ಯೋಜನೆಗಳಿಗೆ ಅಗತ್ಯವಾದ ಹಣವನ್ನು ರೈತರಿಂದಲೇ ಆಡ್ವಾನ್ಸ್ ಕಾಂಟ್ರಿಬ್ಯೂಷನ್ ರೂಪದಲ್ಲಿ ಪಡೆದುಕೊಳ್ಳಿ ಎಂದು ಸಲಹೆ ಕೊಟ್ಟರು. ಇದಕ್ಕೆ ನನ್ನ ಸಲಹೆ ಇಷ್ಟೆ, ಇವೊತ್ತು ಬೆಂಗಳೂರಿನ ರಸ್ತೆಗಳಿಲ್ಲಾ ಮಂಳೆ ಬಂದು ಹಾಳಾಗಿವೆ ಎಲ್ಲ ಕಡೆಯೂ ಗುಂಡಿಗಳು ಬಿದ್ದಿವೆ. ಈಗ ಬಸ್‌ಗಳನ್ನು ಮತ್ತು ಕಾರುಗಳನ್ನು ಇಟ್ಟಿರುವವರೆಲ್ಲರೂ ಹಣವಂತರೇ ಆಗಿದ್ದಾರೆ. ಆದ್ದರಿಂದ ರಸ್ತೆಗಳ ರಿಪೇರಿಗೆಂದು ಮುಂದಿನ ಹತ್ತು ವರ್ಷಗಳ ತೆರಿಗೆಯನ್ನು ಅವರಿಂದ ಒಂದೇ ಸಲ ವಸೂಲಿ ಮಾಡುವಂತಹ ಕಾನೂನನ್ನು ಏತಕ್ಕೆ ಜಾರಿಗೆ ತರಬಾರದು ? ರೈತರಿಂದ ಮುಂಗಡವಾಗಿ ಟ್ಯಾಕ್ಸ್ ಕಲೆಕ್ಟ್ ಮಾಡುವಂತಹ ಧೋರಣೆಯನ್ನು ಸರ್ಕಾರ ತಳೆಯುವುದಾದರೆ ಹಣವಂತರಿಂದಲೂ ಏತಕ್ಕೆ ಮುಂಗಡವಾಗಿ ಟ್ಯಾಕ್ಸ್ ಕಲೆಕ್ಟ್ ಮಾಡುವಂತಹ ಪ್ರವೃತ್ತಿಯನ್ನು ಸರ್ಕಾರ ಬೆಳೆಸಿಕೊಳ್ಳಬಾರದು ? ಮತ್ತೆ ಎರಡನೆಯದಾಗಿ ರೈತರಿಂದ ೩೮ ಕೋಟಿ ರೂಪಾಯಿಗಳಷ್ಟು ನೀರಿನ ತೆರಿಗೆ ಬಾಕಿ ಬರಬೇಕಾಗಿದೆ ಎಂದು ಸನ್ಮಾನ್ಯ ಮಂತ್ರಿಗಳು ಆಪ್ಪಣೆ ಕೊಡಿಸಿದರು. ಹಾಗಿದ್ದರೆ ಅಬಕಾರಿ ಇಲಾಖೆಗೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಗೆ ಬರಬೇಕಾದ ಬಾಕಿ ಎಷ್ಟು ಎಂದು ತಿಳಿಸಿದರೆ ನಾನು ಅವರಿಗೆ ಕೃತಜ್ಞನಾಗಿರುತ್ತೇನೆ. ಇದರ ಜೊತೆಗೆ ಈ ಇಲಾಖೆಗಳ ಮೂಲಕ ಸೋರಿ ಹೋಗತಕ್ಕಂಥ ಹಣ ಎಷ್ಟೆಂಬುದನ್ನು ಸಹ ಹೇಳಬೇಕು. ಕೇವಲ ೩೮ ಕೋಟಿ ರೂಪಾಯಿಗಳ ಬಾಕಿಯ ಹಣದ ಮೇಲೆಯೇ ನಿಮ್ಮ ಕಣ್ಣು ಏತಕ್ಕೆ ಇದೆ ? ದೊಡ್ಡ ದೊಡ್ಡ ಖದೀಮರಿಂದ ಬಾಕಿ ಬರಬೇಕಾದ ಹಣವನ್ನು ಏತಕ್ಕೆ ವಸೂಲಿ ಮಾಡಬಾರದು ? ಈ ಬಾಕಿಯನ್ನು ಮೊದಲು ವಸೂಲಿ ಮಾಡಿ.

ಶ್ರೀ ಕೆ. ಬಿ. ಕೋಳಿವಾಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಅನೇಕ ಸಂದರ್ಭಗಳಲ್ಲಿ ದಿಟ್ಟ ನಿಲುವನ್ನು ತೆಗೆದು ಕೊಳ್ಳಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಎಲ್ಲ ಪಕ್ಷಗಳ ಸದಸ್ಯರು ಸೇರಿ ಒಂದೇ ಧ್ವನಿಯಲ್ಲಿ ಪ್ರತಿವರ್ಷ ನೀರಾವರಿ ಯೋಜನೆಗಳಿಗೆ ಮುನ್ನೂರು ಕೋಟಿ ರೂಪಾಯಿಗಳನ್ನು ಸರ್ಕಾರ ಕೊಡಲೇಬೇಕೆಂದು ಒಮ್ಮತದಿಂದ ನಿರ್ಣಯ ಮಾಡಿ ಕೊಟ್ಟಿದ್ದೇವೆ. ಈಗ ಇದು ನಿಮ್ಮ ಸರ್ಕಾರದ ಕೈಯಲ್ಲಿದೆ. ಇಷ್ಟು ಹಣವನ್ನು ನೀರಾವರಿ ಯೋಜನೆಗಳಿಗೆ ಕೊಡುವುದು ಸರ್ಕಾರದ ಕರ್ತವ್ಯ ಇದರಲ್ಲಿ ಸರ್ಕಾರದವರು ವಿಫಲರಾದರೆ ನಾವೇನು ಮಾಡಬೇಕು ? ಈ ನಿರ್ಣಯಕ್ಕೆ ಈ ಸಭೆಯ ಸದಸ್ಯರೆಲ್ಲರೂ ಪಕ್ಷಬೇಧ ಮರೆತು ಬೆಂಬಲ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಬೇರೆ ನಿರ್ಣಯ ಏನಾದರು ಇದ್ದರೆ ತೆಗೆದುಕೊಂಡು ಬನ್ನಿ, ಎಲ್ಲ ಸದಸ್ಯರೂ ಅದನ್ನು ಒಪ್ಪುತ್ತೇವೆ ಮತ್ತು

ಬೆಂಬಲ ಕೊಡುತ್ತೇವೆ. ಈಗತಾನೇ ಮಾನ್ಯ ರಾಮಯ್ಯನವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಮತ್ತು ಅಬಕಾರಿ ಇಲಾಖೆಯಲ್ಲಿ ಹಣ ಸೋರಿಹೋಗುತ್ತಿರುವುದನ್ನು ತಮ್ಮ ಗಮನಕ್ಕೆ ತಂದರು. ಈ ವಿಚಾರದಲ್ಲಿ ನಿಮ್ಮ ರಾಜಕೀಯ ನೀತಿಯನ್ನು ಬದಲಾವಣೆ ಮಾಡಿ ಹಣ ಸೋರಿಹೋಗುವುದನ್ನು ತಡೆಗಟ್ಟಿದರೆ ನಮಗೆ ನೀರಾವರಿಗೆ ಬೇಕಾಗುವ ಹಣ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತದೆ. ಆದ್ದರಿಂದ ನಿಮ್ಮ ರಾಜಕೀಯಕ್ಕಾಗಿ ಈ ಎರಡು ಇಲಾಖೆಗಳನ್ನು ದುರುಪಯೋಗ ಮಾಡುವುದನ್ನು ಕೈಬಿಡ ಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಮಾನ್ಯ ದೇವೇಗೌಡರು ವಿರೋಧಪಕ್ಷದವರಲ್ಲಿ.....

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೇ, ಆವರು ಇದರ ಬಗ್ಗೆ ಮಾತನಾಡಲು ತಮಗೆ ನೋಟೀಸ್ ಕೊಟ್ಟಿದ್ದಾರೆಯೇ ?

ಶ್ರೀ ಡಿ. ಎ. ಚಿನ್ನಪ್ಪ —ಒಂದೊಂದು ಗಮನ ಸೆಳೆಯುವ ಸೂಚನೆಗೂ ತಾವು ಒಂದೊಂದು ಗಂಟೆಯಷ್ಟು ಕಾಲಾವಕಾಶ ಕೊಟ್ಟರೆ ಹೇಗೆ ?

ಶ್ರೀ ಆರ್. ಎನ್. ನಾಯಕ್.—ಇದರ ಮೇಲೆ ಎಲ್ಲರೂ ಮಾತನಾಡುವುದಿದ್ದರೆ ಬೇರೆ ರೂಪದಲ್ಲಿ ಇದನ್ನು ಚರ್ಚೆ ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ನಾನು ಅವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಈ ಹಿಂದೆ ಇಲ್ಲಿ ಗಮನ ಸೆಳೆಯುವ ಸೂಚನೆ ಮೇಲೆ ಎರಡು ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆಯಾದ ಉದಾಹರಣೆ ಇದೆ. ಆ ಸಂದರ್ಭದಲ್ಲಿ ಮಾತನಾಡಿದವರೆಲ್ಲಾ ನೋಟೀಸ್ ಕೊಟ್ಟೇ ಮಾತನಾಡಿದರೇ ? ಆದರೆ ಈಗ ಅವರು ನನಗೆ ನೋಟೀಸ್ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಇದಕ್ಕೆ ತಾವು ಸಮಯಾವನ್ನು ನಿಗದಿ ಮಾಡುವುದು ಒಳ್ಳೆಯದು.

ಅಧ್ಯಕ್ಷರು. —ನಾನು ಅವರಿಗೆ ಅವಕಾಶ ಕೊಟ್ಟಿದ್ದೇನೆ. ಅವರು ಮಾತನಾಡುತ್ತಾರೆ.

ಶ್ರೀ ಎಚ್ ಎಲ್. ತಿಮ್ಮೇಗೌಡ.—ನೆನ್ನೆ ದಿವಸ ಮಾನ್ಯ ದೇವೇಗೌಡರು ನಮ್ಮ ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸಲಹೆಗಳನ್ನು ಕೊಡಿ ಎಂದು ವಿರೋಧಪಕ್ಷದವರಲ್ಲಿ ಕೇಳಿ ಕೊಂಡರು. ಈ ಬಗ್ಗೆ ಎಲ್ಲರೂ ಸೇರಿ ನಮ್ಮ ಸಂಪನ್ಮೂಲವನ್ನು ಕ್ರೂಢೀಕರಿಸಲು ಪ್ರಯತ್ನ ಮಾಡೋಣವೆಂದು ಹೇಳಿದ್ದಾರೆ. ಆದರೂ ಸಹ ಈ ಬಗ್ಗೆ ಒಂದು ನಿರ್ಣಯ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಒಂದು ಕಡೆ ಇವರು ಈ ರೀತಿ ಹೇಳಿದರೆ ಮತ್ತೊಂದು ಕಡೆ ಇವರು ರಾಜಕೀಯವಾಗಿ ಮತ್ತು ಪಾರ್ಮಿಕವಾಗಿ ಏನು ಹೇಳುತ್ತಾರೆಂದರೆ, ಉತ್ಪಾದನೆ ಆಗದಿರುವಂತಹ ಬಾಬುಗಳ ಮೇಲೆ ನಮ್ಮ ಸರ್ಕಾರ ಹಣ ವೆಚ್ಚ ಮಾಡುತ್ತಿದೆ ಎಂದು ಹೇಳುತ್ತಾರೆ.

ಈಗ ಪಠ್ಯ ಪುಸ್ತಕಗಳನ್ನು ಮಕ್ಕಳಿಗೆ ಕೊಡುವುದನ್ನು ನಿಲ್ಲಿಸಬೇಕು ಎಂದು ನಾವು ನಿರ್ಣಯ ತಂದೆವು ಎಂದು ಇಟ್ಟುಕೊಳ್ಳೋಣ. ನಾಳೆ ದಿವಸ ಮಾನ್ಯ ಶ್ರೀನಿವಾಸ್‌ರವರು ತಮ್ಮ ಭಾಷಣದಲ್ಲಿ ಪಠ್ಯ ಪುಸ್ತಕಗಳನ್ನು ಉಚಿತವಾಗಿ ಕೊಡುತ್ತೇವೆಂದು ಹೇಳಿ ಕೊಟ್ಟರು, ಆಮೇಲೆ ಅದನ್ನು ನಿಲ್ಲಿಸಿಬಿಟ್ಟರು, ಆವರಿಗೆ ನೀವು ಓಟು ಕೊಡುತ್ತೀರಾ ಎಂದು ಜನರನ್ನು ಕೇಳಬಹುದು.

(ಗೊಂದಲ)

ಶ್ರೀ ಪಿಟ್. ಎಲ್. ತಿಮ್ಮೇಗೌಡ.—ಅದಕ್ಕೋಸ್ಕರ ನಾನು ಹೇಳುತ್ತೇನೆ. ನಾನು ನಿಮ್ಮನ್ನು ದೂಷಣೆ ಮಾಡುವುದು, ನೀವು ನಮ್ಮನ್ನು ದೂಷಣೆ ಮಾಡುವುದು ಬಿಡಬೇಕಾದರೆ ನೀವೇನೇ ಈ ರೀತಿ ನಿರ್ಣಯ ತಂದು ಅದನ್ನು ಇವರು ಒಪ್ಪಿಕೊಂಡರೆ ನೀವು ನಮ್ಮನ್ನು ದೂಷಣೆ ಮಾಡುವ ಹಾಗಿಲ್ಲ, ನಾವು ನಿಮ್ಮನ್ನು ದೂಷಣೆ ಮಾಡುವ ಹಾಗಿಲ್ಲ, ಯಾವುಯಾವುದು ಅನ್-ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಇದೆ ಅದನ್ನು ನಿಲ್ಲಿಸಿ ಎಂದು ನಿಮ್ಮಿಂದ ಸೂಚನೆ ಬಂದರೆ ಅದನ್ನು ನಮ್ಮ ಸರ್ಕಾರ ಒಪ್ಪಿಕೊಂಡರೆ ನೀವು ನಮ್ಮನ್ನು ದೂಷಣೆ ಮಾಡುವ ಹಾಗಿಲ್ಲ, ನಾವು ನಿಮ್ಮನ್ನು ದೂಷಣೆ ಮಾಡುವ ಹಾಗಿಲ್ಲ. ಮಾನ್ಯ ಶ್ರೀನಿವಾಸ್‌ರವರು ಹೇಳಿದಹಾಗೆ ಎಲ್ಲಾ ಪೊಲಿಟಿಕಲ್ ಪಾರ್ಟೀಸ್, ರೈತ

ಸಂಘದವರು ಎಲ್ಲರೂ ಒಗ್ಗಟ್ಟಾಗಿ ದಿಟ್ಟವಾದ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ, ಆದನ್ನು ಮಾಡಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನುವುದು ಎಲ್ಲ ಸದಸ್ಯರ ಮನಸ್ಸಿನಲ್ಲೂ ಇದೆ. ಇದು ಜನತಾ ಪಕ್ಷದ ಅಥವಾ ಕಾಂಗ್ರೆಸ್ ಪಕ್ಷದ ಪ್ರಶ್ನೆಯಲ್ಲ, ಎಲ್ಲರಲ್ಲೂ ಆ ಭಾವನೆ ಇದೆ. ನೀರನ್ನು ಉಪಯೋಗ ಮಾಡಿಕೊಳ್ಳಬೇಕು ಎನ್ನತಕ್ಕಂಥ ಭಾವನೆ ಸಂದೈಪದಿಂದ ಪ್ರತಿಯೊಬ್ಬರಲ್ಲೂ ಬೆಳೆದಿದೆ. ಆದರೆ ಹಣದ ಪ್ರಶ್ನೆ ಚರ್ಚೆಗೆ ಬಂದಾಗ ನೀವು ಹೇಳಿ. ನಾವು ಹೇಳಿ ಏನ್ನುವುದು ಬೇಡ. ಅತ್ಯಂತ ಪ್ರಾಮಾಣಿಕವಾದ ಸಲಹೆಯನ್ನು ಈ ಸದನದಲ್ಲಿ ಮಾನ್ಯ ಕೆ. ಹೆಚ್. ಶ್ರೀನಿವಾಸ್‌ರವರು ಕೊಟ್ಟಿದ್ದಾರೆ, ಅವರನ್ನು ನಾನು ಅಭಿನಂದಿಸುತ್ತೇನೆ ಅವರು ಏನು ಹೇಳಿದರು ಅಂದರೆ, ಇದಕ್ಕೆ ಒಂದು ಶೃಂಗಸಭೆ ಕರೆಯಿರಿ, ಎಲ್ಲಾ ಪಾರ್ಟಿಯವರನ್ನೂ ಕರೆಯಿರಿ, ರೈತ ಮುಖಂಡರನ್ನೂ ಕರೆಯಿರಿ, ಆಲ್ಲಿ ಕೆಲವು ಡಿಸಿಷನ್ ತೆಗೆದುಕೊಳ್ಳೋಣ ಎಂದು ಅದು ಆದಮೇಲೆ ನಾವು ಇನ್ನೊಬ್ಬರನ್ನು ದೂಷಣೆ ಮಾಡುವ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ಇದೂ ಕಲೆಕ್ಟೀವ್ ಡಿಸಿಷನ್. ನೀವು ಸಲಹೆಯನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ನಾನೂ ಶೃಂಗಸಭೆ ಕರೆಯುತ್ತೇನೆ, ಎಲ್ಲರನ್ನೂ ಕರೆಯುತ್ತೇನೆ, ಎಲ್ಲಾ ಪಕ್ಷದವರನ್ನೂ ಕರೆಯುತ್ತೇನೆ. ಆ ಸಭೆಯಲ್ಲಿ ನಾವು ನಿರ್ಣಯ ಮಾಡೋಣ. ಮಾನ್ಯ ವೈ. ಕೆ. ರಾಮಯ್ಯನವರು ಹೇಳಿದಂಥ ಮಾತನ್ನು ಅರ್ಥ ಮಾಡಿಕೊಳ್ಳಬಲ್ಲೆ. ಅವರು ಗ್ರಾಮೀಣ ಪ್ರದೇಶದಿಂದ ಆ ಪರಿಸರದಿಂದ ಬಂದಿರತಕ್ಕವರು, ಅವರಿಗೆ ಕಳಕಳಿ ಇದೆ, ಅವರೂ ಹೇಳಿದಂಥ ಮಾತನ್ನು ಅರ್ಥಮಾಡಿಕೊಳ್ಳಬಲ್ಲೆ. ನಾನು ಅವರಿಗೆ ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ಕೆಲವು ಸಂದರ್ಭಗಳಲ್ಲಿ ಇಂತಹ ಅನಿವಾರ್ಯವಾದಂಥ ಬಿಕ್ಕಟ್ಟಿಗೆ ಸಿಕ್ಕುತ್ತೇನೆ. ಕೋರ್ಟ್‌ಗಳಲ್ಲಿ ಕೆಲವು ತಡೆ ಆರ್ಡರ್ ಆಗಬಹುದು, ಎಕ್ಸೈಜ್ ಆಗಬಹುದು, ಮತ್ತೊಂದು ಆಗಬಹುದು, ಕಮರ್ಷಿಯಲ್ ಟ್ಯಾಕ್ಸ್ ಆಗಬಹುದು. ಒಂದು ಸಣ್ಣ ಉದಾಹರಣೆ ಹೇಳುತ್ತೇನೆ. ಮೈಸೂರಿನ ಕೆ.ಆರ್.ಎಸ್.ನಲ್ಲಿ ಎರಡು ಹೋಟೆಲ್‌ಗಳಿವೆ ಯಾವತ್ತೋ ಅವನ್ನು ೫ ಸಾವಿರಕ್ಕೋ ೬ ಸಾವಿರಕ್ಕೋ ಬಾಡಿಗೆಗೆ ಕೊಟ್ಟಿದ್ದಾರೆ. ನಾವು ಬಂದ ಮೇಲೆ ಅದನ್ನು ಏನಾದರೂ ಮಾಡಿ ರಿವೈಸ್ ಮಾಡಿದರೆ ಸರ್ಕಾರಕ್ಕೆ ೪-೫ ಲಕ್ಷ ಬರಬಹುದು ಎಂದು ಪ್ರಯತ್ನ ಮಾಡಿದರೆ, ಆದಕ್ಕೆ ಸ್ಟೇ ಬಂತು, ಆ ಸ್ಟೇ ಅನ್ನು ವೇಕೇಟ್ ಮಾಡಿಸಲಿಕ್ಕೆ ನನ್ನ ಕೈಯಲ್ಲಿ ಆಗಲಿಲ್ಲ. ನಾನು ಯಾರಿಗೂ ದೂಷಣೆ ಮಾಡುವುದಿಲ್ಲ. ಲಾ ಡಿಪಾರ್ಟ್‌ಮೆಂಟ್‌ನವರನ್ನು ಕರೆಸಿ ವಿಚಾರಿಂಗ್ ಮಾಡಿದೆ, ಅಡ್ವೋಕೇಟ್ ಜನರಲ್‌ನ್ನು ಕರೆಸಿ ವಿಚಾರಿಂಗ್ ಮಾಡಿದೆ, ಆದೂ ಆಗಲಿಲ್ಲ. ಹೀಗೆ ನಾನಾ ತೊಂದರೆಗಳಿವೆ, ಏಕೆಂದರೆ ನಾನು ಉದಾಹರಣೆ ಕೊಟ್ಟೆ ಅಷ್ಟೆ. ನೀವು ಹೇಳುವ ಭಾವನೆಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಏನೆಂದರೆ, ಈ ಯೋಜನೆಗಳ ಮುಖೇನ ಇವತ್ತು ಯಾರ್ಯಾರು ಲಾಭ ಪಡೆದುಕೊಳ್ಳುತ್ತಾರೆ, ನೀರಾವರಿ ಯೋಜನೆಯೇ ಆಲ್ಲ ಮತ್ತೊಂದು ಯೋಜನೆಯಾಗಬಹುದು, ಈ ಯೋಜನೆಗಳ ಒಂದು ಕಾರ್ಯಗತದಿಂದ ಬರತಕ್ಕಂಥ ಫಲವನ್ನು ಊಟ ಮಾಡತಕ್ಕಂಥವರು ಯಾರು ಈ ಸಮಾಜದಲ್ಲಿ ಆರ್ಥಿಕವಾಗಿ ಸದೃಢವಾಗಿದ್ದಾರೋ ಅವರೆಲ್ಲರಿಂದಲೂ ಒಂದಲ್ಲ ಒಂದು ಪ್ರಕಾರದಲ್ಲಿ ಸಂಪನ್ಮೂಲ ರೂಢಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುವ ಬಗ್ಗೆ ನೀವು ಏನು ಹೇಳಿದಿರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ ಆಮೇಲೆ ನನಗಂತೂ ಎಕ್ಸೈಜ್ ಕಂಟ್ರಾಕ್ಟರ್ಸ್ ಅಥವಾ ಇನ್ಯಾವುದೋ ಪೂಂಜಿಪತ್ತಿಗಳವರ ಸಂಪರ್ಕ ಕಡಿಮೆ ಇದೆ. ನನಗೇನೂ ಭಯವಿಲ್ಲ, ನಾನು ಮುಚ್ಚುಮರೆಯಿಲ್ಲದೆ ಹೇಳುತ್ತೇನೆ. ನೀವು ಏನು ಸದನದಲ್ಲಿ ಹಾರ್ಡ್‌ಲೈನ್ ತೆಗೆದುಕೊಳ್ಳಬೇಕು ಎಂದ ಹೇಳಿದಿರೋ ಆ ಹಾರ್ಡ್‌ಲೈನನ್ನು ನಾನು ತೆಗೆದುಕೊಳ್ಳುತ್ತೇನೆ ಎಂದು ಹೇಳುತ್ತೇನೆ. ನಾನು ಮುಚ್ಚುಮರೆಯಿಲ್ಲದೆ ಹೇಳಿದೆ. ಸುಮಾರು ಐದೂವರೆ ವರ್ಷಗಳ ಹಿಂದೆ ಈ ಸರ್ಕಾರ ೧೯೮೩ರಲ್ಲಿ ಅಧಿಕಾರಕ್ಕೆ ಬಂದಮೇಲೆ ಎರಡು ವಿಚಾರಗಳನ್ನು ಆತ್ಮಸಾಕ್ಷಿಯಾಗಿ ಹೇಳಿದೆ. ಒಂದನೆಯದು, ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡಬೇಕು ಎಂದು ನನ್ನ ವ್ಯಾಪ್ತಿಯಲ್ಲಿ, ಸಚಿವ ಸಂಪುಟದ ಸಭೆಯಲ್ಲಿ, ಪಾರ್ಟಿ ವಿಚಾರಿಂಗ್‌ನಲ್ಲಿ ಹೇಳಿದೆ, ಸ್ವಾಮಿ, ಇದನ್ನು ಎಲ್ಲೆಕಟ್ಟು ಮೀರಿ ಹೊರಗಡೆ ಬಹಿರಂಗ ಸಭೆಯಲ್ಲಿ ಕೂಡ ಹೇಳಿದೆ. ಈ ಮಾತನ್ನು ಪಕ್ಷದ ಎಲ್ಲೆಕಟ್ಟು ಮೀರಿ ಹೇಳಿದ್ದೇನೆ. ಮಂತ್ರಿಯಾಗಿ ಹೇಳಿದ್ದೇನೆ. ಈ ಸದನದಲ್ಲೂ ಹೇಳಿದ್ದೇನೆ. ಒಂದು ಪತ್ರಿಕೆಯವರು ಇದು ಪಾಯಿಂಟ್/ವ್ಯೂ ಎಂದು ಬರೆದರು, ಕ್ಯಾಬಿನೆಟ್ ಮಂತ್ರಿಗಳಾಗಿ ಆ ರೀತಿ ಹೇಳಬಾರದಾಗಿತ್ತು

ಎಂದು ಬರೆದರು. ಅದರ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ನನ್ನ ಆತ್ಮಸಾಕ್ಷಿಯಂತೆ ನಾನು ನಡೆದುಕೊಂಡಿದ್ದೇನೆ. ನಾನು ಯಾರಿಗೂ ಅಂಜಿ ನಡೆದುಕೊಂಡಿಲ್ಲ. ಆನಾತ್ಪಾದಕ ವೆಚ್ಚವನ್ನು ಕಡಿಮೆ ಮಾಡಲೇಬೇಕಾಗಿದೆ. ತಮಗೆ ಜ್ಞಾಪಕ ಇದೆ, ವಿಧಾನ ಸೌಧದ ಮೆಟ್ಟಿಲಿಗೆ ಗ್ರಾನೈಟ್ ಹಾಕುವ ವಿಚಾರ ಬಂತು. ಶ್ಯಾಂಪಲ್ಲಾಗಿ ಹಾಕಲಾಗಿತ್ತು, ನಾನು ಮಂತ್ರಿಯಾಗಿ ಬಂದಕೂಡಲೇ ಅದರ ಆವಶ್ಯಕತೆ ಇಲ್ಲವೆಂದು ತೆಗೆಸಿಹಾಕಿದೆ. ಫಾರಿನರ್ಸ್ ಬರುತ್ತಾರೆ, ನಾನು ಕೂಡ ವೈಟ್ ಹೌಸ್ ನೋಡಿದ್ದೇನೆ. ಇವತ್ತು ನಮ್ಮ ರೈತನ ಹೊಲಕ್ಕೆ ನೀರು ಹೋಗಬೇಕು. ಯಾವರೀತಿ ಮಿತವ್ಯಯ ಮಾಡಬೇಕು, ಹೇಗೆ ಮಾಡಬೇಕು ಎಂಬ ವಿಚಾರದಲ್ಲಿ ಚಿಂತನೆ ಮಾಡಬೇಕಾಗಿದೆ. ಇವತ್ತು ಹಳ್ಳಿಯ ಜನತೆಯ ಆರ್ಥಿಕ ಅಭಿವೃದ್ಧಿಗೆ ಕಾಯಾವಾಚಾಮನಸಾ ನಾನು ಪ್ರತಿಜ್ಞೆ ಮಾಡಿದ್ದೇನೆ. ನನ್ನ ಇಲಾಖೆ ಫೈಲುಗಳನ್ನು ಕಳುಹಿಸಿಕೊಡುತ್ತೇನೆ ನೋಡಿ ಎಂದು ಹೇಳಿದ್ದೆ. ಅನುತ್ಪಾದಕ ವೆಚ್ಚವನ್ನು ಕಡಿಮೆ ಮಾಡಬೇಕಾಗಿರುತ್ತದೆ. ಈ ಮಾತನ್ನು ಕೂಡ ಅಂಜಿಕೆ ಇಲ್ಲದೆ ಹೇಳಿದ್ದೇನೆ. ಹುಬ್ಬಳ್ಳಿ ಧಾರವಾಡ ವಾಟರ್ ಸಪ್ಲೈಗೆ ಸಂಬಂಧಪಟ್ಟಂತೆ ಪ್ರಶ್ನೆ ಬಂತು. ಮುಖ್ಯ ಮಂತ್ರಿಗಳು ಫೌಂಡೇಷನ್ ಹಾಕುವ ಸಂದರ್ಭದಲ್ಲಿ ಅಲ್ಲಿನ ಮೇಯರ್ ಅವರಿಗೆ ನೀವು ಎಷ್ಟು ತುಂಬುತ್ತೀರಿ ಹೇಳಿ ಎಂದು ಕೇಳಿದೆ. ಪೂಲೆ ಹಾಕಿ ಹೊಗಳಿಬಿಟ್ಟು ಕಳುಹಿಸಿದರೆ, ೮.೧೦ ಕೋಟಿ ಮಂಜೂರು ಮಾಡುತ್ತೇವೆ. ಇದು ಜನಗಳ ಸರ್ಕಾರ, ಅವರ ನಿರ್ದೇಶನದಂತೆ ಆಡಳಿತ ನಡೆಸಬೇಕಾಗುತ್ತದೆ. ಇದರಲ್ಲಿ ರಾಜಕೀಯ ಬಳಸುವುದು ಬೇಡ. ನಮ್ಮ ರಾವಂಯ್ಯನವರಿಗೆ ಯಾರದೇ ಮುಖದಾಕ್ಷಿಣ್ಯ ಇಲ್ಲದೇ ಮಾತನಾಡತಕ್ಕ ನೈತಿಕ ಶಕ್ತಿ ಇದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಸೇಲ್ಸ್ ಟ್ಯಾಕ್ಸ್ ಇರಬಹುದು, ಎಕ್ಸೈಜ್ ಡ್ಯೂಟಿ ಇರಬಹುದು, ನಿರ್ದಾಕ್ಷಿಣ್ಯವಾಗಿ ವಸೂಲು ಮಾಡೋಣ. ನೀವು ಯಾವ ಕೋರಂನಲ್ಲಿ ಬೇಕಾದರೂ ಹೇಳಿ, ಪಾರ್ಟಿ ಕೋರಂನಲ್ಲಿ ಹೇಳಿ. ನಾನು ದೆಹಲಿಯಿಂದ ಬಂದ ಕೂಡಲೇ ಎಲ್ಲ ಪಕ್ಷಗಳ ಸಭೆ ಕರೆಯುತ್ತೇನೆ. ರೈತ ಮುಖಂಡರುಗಳ ಸಭೆಯನ್ನು ಕರೆಯುತ್ತೇನೆ. ರೈತರು ತೆರಿಗೆ ಕೊಡಬೇಕಾಗುತ್ತದೆ. ೧ ಎಕರೆ ಅರ್ಧ ಎಕರೆ ಇರತಕ್ಕವರಿಗೂ ಅನುಕೂಲ ಆಗುತ್ತದೆ. ಯಾರು ಇದರ ಲಾಭ ತೆಗೆದುಕೊಳ್ಳುತ್ತಾರೆ, ಅವರು ಟ್ಯಾಕ್ಸ್ ಕಟ್ಟಲಿ. ಇವತ್ತು ನಾನು ಒಂದು ಎಕರೆ ಬಾಳೆ ತೋಟದಲ್ಲಿ ೨೫–೩೦ ಸಾವಿರ ರೂಪಾಯಿ ದುಡಿಯುತ್ತೇನೆ. ಮೈ ಬಗ್ಗಿಸಿ ದುಡಿಯಬೇಕು, ಆದರ ಬಗ್ಗೆ ಕೂಡ ಇಲ್ಲಿ ರಾತ್ರಿಹೊತ್ತು ಎಲ್ಲೋ ಇರತಕ್ಕವರು ಮಾತನಾಡಿದರು. ಇನ್‌ಕಂ ಟ್ಯಾಕ್ಸ್ ಇಲಾಖೆಗೆ ಬರೆದರು. ಈ ದೇಶದ ವ್ಯವಹಾರಗಳ ಬಗ್ಗೆ ಚರ್ಚೆ ಆಗಬೇಕು, ಆಗ ಮಾತನಾಡುತ್ತೇನೆ. ಲಾಭ ಬರುವವರು ಕೊಡಲಿ, ಯಾರು ಲಾಭ ಪಡೆಯುವುದಿಲ್ಲವೋ ಅಂಥ ಕಡೆ ಕೇಳುವುದು ಬೇಡ. ೧೦೦ಕ್ಕೆ ೮೦ ಜನ ಇರುವಂತ ಹಳ್ಳಿಗಾಡಿನ ಜನರಿಗೆ ಮೊದಲು ಅನುಕೂಲ ಒದಗಿಸೋಣ. ಮಾನ್ಯ ಶ್ರೀನಿವಾಸ್‌ರವರು ಕೊಟ್ಟ ಸಲಹೆ ಯುಕ್ತವಾಗಿದೆ, ಅವರನ್ನು ಅಭಿನಂದಿಸುತ್ತೇನೆ. ಆದಷ್ಟು ಬೇಗ ಸಭೆ ಕರೆದು ಅವಶ್ಯಾಗ್ರಾವಾದ ಒಂದು ನಿರ್ಣಯ ತೆಗೆದುಕೊಳ್ಳೋಣ. ಇರಿಗೇಷನ್ ಬಾಂಡ್ ವಿಚಾರದಲ್ಲಿ ಕೇಂದ್ರ ಸರ್ಕಾರ ಪರವಾನಗಿ ಕೊಡಬೇಕು. ನಾವು ಡೆಲ್ಲಿಗೆ ಡೆಲಿಗೇಷನ್ ಹೋದಾಗ ಇದರ ಬಗ್ಗೆ ಚರ್ಚೆ ಮಾಡೋಣ. ಇರಿಗೇಷನ್ ಬಾಂಡ್ ರೈತರು ಮಾತ್ರ ತೆಗೆದುಕೊಳ್ಳಬೇಕಾಗಿಲ್ಲ, ದುಡ್ಡು ಇರತಕ್ಕವರು ಯಾರು ಬೇಕಾದರು ತೆಗೆದುಕೊಳ್ಳಬಹುದು. ನಾನು ಒಂದು ಠರಾವನ್ನು ಸದನದಲ್ಲಿ ಮಂಡನೆ ಮಾಡಬೇಕಾಗಿದೆ, ಇದರ ಜೊತೆಗೆ ನ್ಯಾಷನಲೈಸ್ ಬ್ಯಾಂಕುಗಳಿಂದ, ಬೇರೆ ಬ್ಯಾಂಕುಗಳಿಂದ ಸಾಲ ತೆಗೆದುಕೊಳ್ಳುವುದಕ್ಕೆ ವಿರ್ಪಾಡು ಮಾಡೋಣ. ಬಡ್ಡಿ ತುಂಬೋಣ. ಈ ಸದನದಲ್ಲಿ ಠರಾವು ಮಾಡಿಸುತ್ತೇನೆ. ಸರ್ಕಾರ ಬ್ಯಾಂಕುಗಳಿಂದ ಪಡೆಯಂತಕ್ಕ ಸಾಲಕ್ಕೆ ಗ್ಯಾರಂಟಿ ನಿಲ್ಲುತ್ತದೆ. ಇವತ್ತು ಸಾಲ ಮಾಡುವುದಾದರು ಯಾರಿಗೋಸ್ಕರ ? ಸಾಲ ಪಡೆದ ಹಣದಲ್ಲಿ ಅಪವ್ಯಯ ಆದರೆ, ಹ್ಯಾಂಗ್ ಮಾಡಿ. ಸೈಟುಗಳ ಹಂಚಿಕೆ ವಿಚಾರದಲ್ಲಿ ಕೂಡ ಹ್ಯಾಂಗ ಮಾಡುವುದಕ್ಕೆ ಹೇಳಿದ್ದರು.

I am not a coward politician, in my life. I will myself come forward with an official resolution in the next Legislature Session. ಬಡ್ಡಿಯನ್ನು ನಾವು ಕೊಡೋಣ, ಸಬ್ಸಿಡೈಸ್ ಮಾಡೋಣ, ಏತಕ್ಕೆ ಆಗುವುದಿಲ್ಲ ? ಯಾವುದು ಯಾವುದಕ್ಕೋ ಮಾಡುತ್ತೇವೆ, ಇದರ ಬಗ್ಗೆ ನಾನೇ ನಿರ್ಣಯ ಮಂಡನೆ ಮಾಡುತ್ತೇನೆ. ಇವೊತ್ತು ರಾಜ್ಯದ ಅಭಿವೃದ್ಧಿಗೆ ೫–೬ ಸಾವಿರ ಕೋಟಿ ಹಣವನ್ನು ತೆಗೆದುಕೊಂಡರೆ ಹತ್ತು ವರ್ಷದಲ್ಲಿ ಚಿನ್ನದ ನಾಡನ್ನು ಮಾಡಬಹುದು. ಬಾಕಿ ವಿಚಾರದ ಬಗ್ಗೆ ತಾವು ಯಾವ ಟೀಕೆಯನ್ನಾದರೂ ಮಾಡಿ, ಈ ವಿಷಯಕ್ಕೆ ಸಹಕಾರ ಕೊಡುತ್ತೇವೆ ಎಂದು ಹೇಳಿದ್ದಕ್ಕೆ ನಾನು ನಿಮಗೆ ಋಣಿಯಾಗಿದ್ದೇನೆ.

ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ಸಭೆಯನ್ನು ಶೀಘ್ರವಾಗಿ ಕರೆಯಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕಿಂತಲೂ ಹೆಚ್ಚು ಉತ್ತರ ಹೇಳಲಾರೆ.

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೆ, ನಾನು ಮೂರು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೇನೆ. ಸುಮಾರು ೨೦೦-೨೦೦ ಜನರನ್ನು ಹೊರಕ್ಕೆ ತೆಗೆದು ಹಾಕಿದ್ದಾರೆ.

(ಗೊಂದಲ)

ಅಧ್ಯಕ್ಷರು.— ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್.— ಅಧ್ಯಕ್ಷರೆ, ಇವೊತ್ತು ಆಸೆಂಬ್ಲಿ ಮೀಟಿಂಗ್ ಕೊನೆಯಾಗುತ್ತದೆ ನಾನು ಕಳುಹಿಸಿದ ಮೂರು ಗಮನಸೆಳೆಯುವ ಸೂಚನೆಯಲ್ಲಿ ಒಂದಕ್ಕೂ ಸರ್ಕಾರ ಗಮನಹರಿಸಿಲ್ಲ.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.— ಅಧ್ಯಕ್ಷರೆ...

ಶ್ರೀ ಡಿ. ಟಿ. ಜಯಕುಮಾರ್.—ತಾವು ಯಾವುದೋ ಕೆಲಸಕ್ಕೆ ಬಾರದ್ದಕ್ಕೆ ಗಮನ ಕೊಡುವಾಗ ಸಾರ್ವಜನಿಕ ಮಹತ್ವದ್ದಕ್ಕೆ ಗಮನ ಕೊಡಲಿಕ್ಕೆ ಬರುವುದಿಲ್ಲವೇ ?

(ಗೊಂದಲ)

ಅಧ್ಯಕ್ಷರು.— ಒಂದೊಂದಾಗಿ ಆಜೆಂಡಾ ಪ್ರಕಾರ ತೆಗೆದುಕೊಳ್ಳೋಣ ದಯವಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.— ಅಧ್ಯಕ್ಷರೆ, ನನ್ನ ಪ್ರಶ್ನೆಯ ಬಗ್ಗೆ ಮಾನ್ಯ ದೇವೇಗೌಡರು ಉತ್ತರ ಕೊಡುತ್ತಾರೋ ಇಲ್ಲವೋ ಎನ್ನುವುದು ಬೇಕು.

(ಗೊಂದಲ)

ಅಧ್ಯಕ್ಷರು.— ತಮ್ಮದು ಒಂದು ಇದೆ, ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಪಟಮಕ್ಕಿ ರತ್ನಾಕರ್.— ಅಧ್ಯಕ್ಷರೆ, ವರಾಹಿ ವಿಚಾರ ಅಲ್ಲ, ಅವರು ಕನ್‌ಫ್ಯೂಸ್ ಮಾಡಿಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು.— ತಮ್ಮದು ಮೂಲಶಿ ಯೋಜನೆ ವಿಚಾರದ ಬಗ್ಗೆ ಇದೆ ದಯವಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಪಟಮಕ್ಕಿ ರತ್ನಾಕರ್.— ನಾನು ಮೂಲತಿ ಜಲಾಶಯದ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ನಿಮ್ಮ ಅಧಿಕಾರಿಗಳು ಅದನ್ನು ವರಾಹಿ ಜಲವಿದ್ಯುತ್ ಯೋಜನೆಗೆ ಕಳುಹಿಸಿ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು.— ನಿಮ್ಮದು ಇದೆ, ನಾನು ತೆಗೆದುಕೊಳ್ಳುತ್ತೇನೆ. ದಯವಮಾಡಿ ಕುಳಿತುಕೊಳ್ಳಿ.

ಶ್ರೀ ಪಟಮಕ್ಕಿ ರತ್ನಾಕರ್.— ಅಧ್ಯಕ್ಷರೆ, ನನಗೆ ದೇವೇಗೌಡರು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.— ಮೂಲತಿ ಯೋಜನೆಯನ್ನು ಪ್ರತ್ಯೇಕವಾಗಿ ತೆಗೆದುಕೊಳ್ಳುವುದಿಲ್ಲ, ಇಲ್ಲಿಯೇ ಡೀಟೈಲ್ಸ್ ಹೇಳಿದ್ದೇನೆ. ಮೂಲತಿ ರಿಸರ್‌ವಾಯರ್ ಕಟ್ಟುವುದರಿಂದ ಎಷ್ಟು ಜಮೀನು ಮುಳುಗಡೆಯಾಗುತ್ತದೆ ಎನ್ನುವುದನ್ನು ಕಾಂಪ್ರಹೆನ್ಸೀವ್ ಆಗಿ ಹೇಳಿದ್ದೇನೆ. ಇನ್ನೇನು ಬೇರೆ ಉತ್ತರ ಕೊಡಬೇಕಾಗಿಲ್ಲ. ಮೂಲತಿ ರಿಸರ್‌ವಾಯರ್‌ನಿಂದ ಫಾರೆಸ್ಟ್ ಲ್ಯಾಂಡ್ ೧೭,೦೨೧ ಎಕರೆ

ಯಷ್ಟು ಮುಳುಗಡೆಯಾಗುತ್ತದೆ. ಡ್ರೈಲ್ಯಾಂಡ್ ೫,೮೫೩ ಎಕರೆ ಮುಳುಗಡೆಯಾಗುತ್ತದೆ. ವೆಟ್‌ಲ್ಯಾಂಡ್ ೭೦೦-೮೦೦ ಎಕರೆ ಮುಳುಗಡೆಯಾಗುತ್ತದೆ. ಗಾರ್ಡನ್ ಲ್ಯಾಂಡ್ ೧,೨೪೧ ಎಕರೆ ಗಳಷ್ಟು ಮುಳುಗಡೆಯಾಗುತ್ತದೆ. ಕಾಫಿ ತೋಟ ೩೮ ಎಕರೆ, ಖಿರಾಬು ಲ್ಯಾಂಡ್ ೧೯೮ ಎಕರೆ ಮುಳುಗಡೆಯಾಗುತ್ತದೆ. ಮತ್ತೆ ಈ ಬಗ್ಗೆ ಇವೊತ್ತಿನ ದಿವಸ ಚರ್ಚೆ ಮಾಡಲಿಕ್ಕೆ ನಾನು ಹೋಗುವುದಿಲ್ಲ, ಇಷ್ಟು ವಾಕ್ಯ ಹೇಳುತ್ತೇನೆ. ಮೂಲತಿ ರಿಸರ್‌ವಾಯರ್ ಕಟ್ಟತಕ್ಕಂತಾದ್ದು, ಅದರಿಂದ ಪ್ರತ್ಯೇಕ ನೀರಾವರಿ ಮಾಡಲಿಕ್ಕೆ ಅಲ್ಲ.

೧೨-೦೦ ಮಧ್ಯಾಹ್ನ

ಸ್ಟೋರೇಜ್ ರಿಸರ್ವಾಯರನ್ನು ಕಟ್ಟಬೇಕೆಂಬ ಉದ್ದೇಶದಿಂದ ಈ ನೀರನ್ನು ಅಲ್ಲಿ ನಿಲ್ಲಿಸಿ ಕೊಂಡು ಅದರ ಕೆಳಗೆ ಇರತಕ್ಕ ಗಾಜನೂರು ಆಣೆಯಿಂದ ಹೈ ಲೆವೆಲ್ ಕೆನಾಲ್‌ನಿಂದ ಧಾರವಾಡ ಜಿಲ್ಲೆ ರಾಯಚೂರು ಜಿಲ್ಲೆ, ಶಿವಮೊಗ್ಗಾ ಜಿಲ್ಲೆಗೆ ನೀರನ್ನು ತರಬೇಕಾಗಿದೆ.—

ಶ್ರೀ ಪಟವಾಕ್ಕಿ ರತ್ನಾಕರ್.— ಮಾನ್ಯ ಅಧ್ಯಕ್ಷರೆ, ಈಗಲೇ ಇದನ್ನು ಚರ್ಚೆ ಮಾಡೋಣವೋ ಅಥವಾ ಕೊನೆಯಲ್ಲಿ ಚರ್ಚೆ ಮಾಡೋಣವೋ ?

ಅಧ್ಯಕ್ಷರು — ವಿವರಣೆಯನ್ನು ಕೇಳುವುದಾದರೆ ಕೇಳಿ. ನಿಮ್ಮದು ೯ನೇ ನಂಬರ್‌ದ್ದು. ಕೇಳುವುದಾದರೆ ಕೇಳಿ. ನಿಮ್ಮದು ಮುಗಿಯಲಿ...

ಶ್ರೀ ಧರ್ಮಸಿಂಗ್.— ಏನು ಸ್ವಾಮಿ ಇದು. ನಾವು ೨ ತಾಸಿನಿಂದ ಇಲ್ಲಿ ಕೂತಿದ್ದೇವೆ. ನಮ್ಮದನ್ನು ತೆಗೆದುಕೊಳ್ಳುವುದನ್ನು ಬಿಟ್ಟು ಅವರದನ್ನು ತೆಗೆದುಕೊಂಡು ಈಗಲೇ ಕೇಳಿ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.— ದೇವೇಗೌಡರೆ, ಅವರಿಗೆ ಡಿಸ್ಪರ್ಟ್ ಮಾಡುವುದು ಬೇಡ. ಅವರದ್ದು ೯ನೇ ನಂಬರ್‌ದು...

ಶ್ರೀ.ಹೆಚ್. ಡಿ. ದೇವೇಗೌಡ.— ಎರಡೂ ಕಂಬೈನ್ಡ್ ಇದ್ದುದರಿಂದ ನಾನು ಹೇಳಿದೆ.

ಅಧ್ಯಕ್ಷರು.— ಹೋಗಲಿ, ಧರ್ಮಸಿಂಗ್‌ರವರೇ ನಿಮ್ಮದನ್ನೇ ಕೇಳಿ.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಭೀಮಾ ನದಿಯಲ್ಲಿ, ಉಜ್ಜನಿ ಡ್ಯಾಂನಲ್ಲಿ ನೀರು ಜಾಸ್ತಿಯಾಗಿದೆ. ಇದರಿಂದ ಉಂಟಾಗಿರುವ ಅಪಾರ ಹಾನಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ ಹೇಳುವುದಾದರೆ ೬ನೇ ತಾರೀಖು ಈ ಕಾಲಿಂಗ್ ಅಟೆನ್‌ಷನ್ ಬಂದಿತ್ತು. ಆಗ ಮಾನ್ಯ ಲೋಕೋಪಯೋಗಿ ಖಾತೆಯ ಮಂತ್ರಿಗಳು ಇದಕ್ಕೆ ವಿವರವನ್ನು ತರಿಸಿ ಕೊಡುತ್ತೇನೆಂದು ಹೇಳಿದರು, ಅನಂತರ ಆರ್. ಡಿ. ಪಿ. ಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು.

ಅಧ್ಯಕ್ಷರು.— ಮೊದಲು ನೀವು ಸರ್ಕಾರದ ಗಮನವನ್ನು ಸೆಳೆಯಿರಿ.

೪ ಕೊಯ್ನಾ ಹಾಗೂ ಉಜ್ಜನಿ ಅಣೆಕಟ್ಟುಗಳಿಂದ ಹೊರಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರವುಂಟಾಗಿರುವುದು.

ಶ್ರೀ ಧರ್ಮಸಿಂಗ್.— ಮಾನ್ಯ ಅಧ್ಯಕ್ಷರೆ, ಕೊಯ್ನಾ ಹಾಗೂ ಉಜ್ಜನಿ ಅಣೆಕಟ್ಟುಗಳಿಂದ ಹೊರ ಬಿಡುತ್ತಿರುವ ಹೆಚ್ಚುವರಿ ನೀರಿನಿಂದ ಭೀಮಾ ನದಿಯಲ್ಲಿ ಮಹಾಪೂರವುಂಟಾಗಿ ಗುಲ್ಬರ್ಗಾ ಜಿಲ್ಲೆಯ ಭೀಮಾ ನದಿಯ ಕೆಳದಂಡೆ ಅದರಲ್ಲೂ ಮುಖ್ಯವಾಗಿ ಜೇವರ್ಗಿ ತಾಲೂಕಿನಲ್ಲಿ ವಾಸಿಸುತ್ತಿರುವ ರೈತರ ಆಸ್ತಿಪಾಸ್ತಿ ಹಾಗೂ ಜೀವಕ್ಕೆ ಉಂಟಾದ ಅಪಾರ ಹಾನಿಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.